# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–35, ಶ್ರೀವಿಶ್ವಾವಸು ಸಂವತ್ಸರ, ಶ್ರಾವಣ–ಭಾದ್ರಪದ ಮಾಸ, ಆಗಸ್ಟ್–2025, ಸಂಚಿಕೆ–1, ಪುಟಗಳು–36, ಬೆಲೆ ರೂ.–15/–




## ವಿಪ್ರ ಬಾಂಧವರೆಲ್ಲರಿಗೂ ಗೌರೀ–ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು



## ಮಹಾಸಭಾ ನೂತನ ಅಧ್ಯಕ್ಷರಾದ ಶ್ರೀ ಎಸ್. ರಘುನಾಥ್ ಪದಗ್ರಹಣ









# ಪದಗ್ರಹಣದ ದೃಶ್ಯಾವಳಿಗಳು

















**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
**ಎಸ್. ರಘುನಾಥ್**

ಹಿರಿಯ ಉಪಾಧ್ಯಕ್ಷರು
**ಆರ್. ಲಕ್ಷ್ಮೀಕಾಂತ್**

ಖಜಾಂಚಿ
**ಸುಬ್ಬನರಸಿಂಹ (ಸುಬ್ಬಣ್ಣ)**

**ವಿಪ್ರನುಡಿ ಪ್ರಕಟಣಾ ಸಮಿತಿ**
ಪ್ರಧಾನ ಸಂಪಾದಕರು
**ಡಾ|| ಎನ್. ಸತ್ಯಪ್ರಕಾಶ್**

ಕಛೇರಿ ಸಮಯ :
ಸೋಮವಾರದಿಂದ ಶುಕ್ರವಾರದವರೆಗೆ
ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.00ಘಂಟೆವರೆಗೆ
ಸಾಯಂಕಾಲ 4.00 ರಿಂದ ರಾತ್ರಿ 7.30ಘಂಟೆವರೆಗೆ
ಶನಿವಾರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.00ರವರೆಗೆ
ವಾರದ ರಜಾದಿನ : ಭಾನುವಾರ

ಮುದ್ರಕರು :
ಪರಿಮಳ ಮುದ್ರಣಾಲಯ
ನಂ 2/1, 'ಎ' 3ನೇ ಕ್ರಾಸ್, ಮೈಸೂರು ರಸ್ತೆ,
ಬೆಂಗಳೂರು–560 026. ದೂ. : 26606061.

# ಗಾಯತ್ರೀ ಮಂತ್ರ



**ಓಂ ತತ್ಸವಿತುರ್ವರೇಣ್ಯಂ**

**ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್**

**ಯಃ** = ಯಾವ ಪರಮಾತ್ಮನು (ಅಂತರ್ಯಾಮಿ ರೂಪದಿಂದ), **ನಃ** = ನಮ್ಮ, **ಧಿಯಃ** = ವಿವೇಕ ಪ್ರಜ್ಞೆಯನ್ನು, **ಪ್ರಚೋದಯಾತ್** = ಪ್ರಚೋದಿಸುವನೋ, **ತತ್** = ಆ, **ಸವಿತುಃ** = ಸಮಸ್ತ ವಿಶ್ವವನ್ನು ಸೃಷ್ಟಿಸುವ, **ದೇವಸ್ಯ** = ಸೂರ್ಯನ ರೂಪದಲ್ಲಿ ಜ್ಯೋತಿರ್ಮಯನಾಗಿ, ಬೆಳಗುತ್ತಿರುವ ಪರಮಾತ್ಮನ, **ವರೇಣ್ಯಂ** = ಪೂಜನೀಯವಾದ, **ಭರ್ಗಃ** = ಜ್ಯೋತಿಯನ್ನು (ಅಜ್ಞಾನವನ್ನು ನಾಶ ಮಾಡುವ), **ಧೀಮಹಿ** = ಧ್ಯಾನಿಸೋಣ.

**ಯಾವ ಪರಮಾತ್ಮನು ಅಂತರ್ಯಾಮಿಯಾಗಿದ್ದುಕೊಂಡು ನಮ್ಮ ವಿವೇಕ ಪ್ರಜ್ಞೆಯನ್ನು ಪ್ರಚೋದಿಸುವನೋ ಅವನೇ ಸಮಸ್ತ ವಿಶ್ವವನ್ನು ಸೃಷ್ಟಿಸುತ್ತಿರುವನು. ಅವನೇ ಸೂರ್ಯನ ರೂಪದಲ್ಲಿ ಜ್ಯೋತಿರ್ಮಯನಾಗಿ ಬೆಳಗುತ್ತಿರುವನು. ಸ್ವಯಂ ಪ್ರಕಾಶ ಮಾನವಾದ, ಅಜ್ಞಾನವನ್ನು ಹೋಗಲಾಡಿಸುವಂತಹ ಆ ಜ್ಯೋತಿಯನ್ನು ಧ್ಯಾನಿಸೋಣ.**

---

**ಓಂ|| ಸಹ ನಾವವತು । ಸಹ ನೌ ಭುನಕ್ತು| ಸಹ ವೀರ್ಯಂಕರವಾವಹೈ ।**
**ತೇಜಸ್ವಿ ನಾವಧೀತಮಸ್ತು । ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ**

ಪರಮಾತ್ಮನು ನಮ್ಮೆಲ್ಲರನ್ನೂ ಸಮಾನವಾಗಿ ಕಾಪಾಡಲಿ. ನಾವೆಲ್ಲರೂ ಪರಸ್ಪರ ಪ್ರೀತಿಯಿಂದ ಬಾಳುವಂತಾಗಲಿ. ನಾವುಗಳು ಯಾರನ್ನು ದ್ವೇಷಿಸುವುದು ಬೇಡ. ನಮ್ಮ ಎಲ್ಲಾ ಕಷ್ಟನಷ್ಟಗಳೂ ದೂರವಾಗಲಿ, ಜಗತ್ತಿಗೆ ಶಾಂತಿವುಂಟಾಗಲಿ.

**ಸೂಚನೆ : ವಿಪ್ರನುಡಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ–ಮುದ್ರಕರ ಅಬಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹಿರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು**

**–ಸಂಪಾದಕ ಮಂಡಳಿ**

# ಅಧ್ಯಕ್ಷರ ನುಡಿ



**ಶ್ರೀಮತಾಚಾರ್ಯೇಭ್ಯೋನಮಃ।**

**ಮಾನ್ಯ ವಿಪ್ರಬಂಧುಗಳೇ! ನಮಸ್ಕಾರಗಳು.**

ಮಾನ್ಯರೇ

ದಿನಾಂಕ 13–4–2025ರಂದು ಮಹಾಸಭೆಯ ಚುನಾವಣೆ ನಡೆದಿದ್ದು ತಮ್ಮೆಲ್ಲರ ಆಶೀರ್ವಾದ ಮತ್ತು ಸಹಕಾರದಿಂದ ನಾನು ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ತಮ್ಮೆಲ್ಲರಿಗೂ ತಿಳಿದಿರುವ ವಿಷಯ. ಈ ಚುನಾವಣೆಯಲ್ಲಿ ಸುಮಾರು 24,600 ಸದಸ್ಯರು ಮತ ಚಲಾಯಿಸಿದ್ದಾರೆ. **ಮಹಾಸಭೆಯ ಎಲ್ಲಾ ಸದಸ್ಯರುಗಳಿಗೆ ಅನಂತ ಧನ್ಯವಾದಗಳು ಹಾಗೂ ಅಭಿನಂದನೆಗಳು.**

**ಕಳೆದ ಮೂರೂವರೆ ವರ್ಷಗಳ ಕಾಲ ಮಹಾಸಭೆಯ ಅಧ್ಯಕ್ಷರಾಗಿ ಆಡಳಿತ ನಡೆಸಿದ ಗೌರವಾನ್ವಿತ ಶ್ರೀ ಅಶೋಕ್ ಹಾರನಹಳ್ಳಿಯವರಿಗೆ ಮತ್ತು ಅವರ ಜೊತೆಯಲ್ಲಿ ಸಹಕರಿಸಿದ ಎಲ್ಲಾ ಗೌರವಾನ್ವಿತ ಪದಾದಿಕಾರಿಗಳಿಗೆ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಅನಂತ ಧನ್ಯವಾದಗಳು.**

ನಮ್ಮ ಪೂರ್ವ ಸೂರಿಗಳು ವಿಪ್ರ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯ ಮಹಾ ಉದ್ದೇಶದಿಂದ ಒಂದು ಸುಭದ್ರ ತಾಣವನ್ನಾಗಿ ನಿರ್ಮಿಸಿರುವ ಈ ನಮ್ಮ **ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ** ಎಂಬ ಸಾಂಸ್ಕೃತಿಕ ರಥವನ್ನು ನಾವೆಲ್ಲರೂ ಸೇರಿ ಪ್ರಗತಿಪಥದತ್ತ ಒಟ್ಟಾಗಿ ನಡೆಸೋಣ ಎಂಬುದೇ ನಮ್ಮ ಹೊಸ ಆಶಯವಾಗಲಿದೆ. ಹೊಸಹುರುಪಿನಿಂದ ನನ್ನ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸುವ ಉತ್ಸಾಹ ನನ್ನಲ್ಲಿ ಇದೆ ಯಾದರೂ, ಒಮ್ಮೆಗೇ ಸಭಾದಲ್ಲಿ ಅನಿರೀಕ್ಷಿತವಾದ ಅಭಿವೃದ್ಧಿಗೆ ಕಾರಣನಾಗಿ ಬಿಡುತ್ತೇನೆ ಎಂಬ ಭ್ರಮೆ ನನ್ನಲಿಲ್ಲ. ಬದಲಿಗೆ, ಹಿಂದಿನವರು ಕ್ರಮಿಸುತ್ತಿದ್ದ ಪಥವನ್ನೇ ಅನುಸರಿಸಿ, ಹೊಸ ಚಿಂತನೆ ಗಳೊಂದಿಗೆ ಮುಂದುವರೆಯುವ ಅಪೇಕ್ಷೆ ನನ್ನ ಹಾಗೂ ನಮ್ಮ ಕಾರ್ಯಕಾರಿ ಸಮಿತಿಯ ಸರ್ವರ ಚಿಂತನೆಯಾಗಿದೆ. **ಈ ದಿಸೆಯಲ್ಲಿ ಶ್ರೀಮಾತೆ ಗಾಯಿತ್ರಿ ದೇವಿಯ ಕೃಪಾಶೀರ್ವಾದ ವನ್ನು ಹಾಗೂ ತಮ್ಮೆಲ್ಲರ ಪ್ರೀತಿಪೂರ್ವಕ ಬೆಂಬಲವನ್ನು ಅಪೇಕ್ಷಿಸುತ್ತಾ ಮುನ್ನಡಿ ಇಡಲು ನಮ್ಮ ಸಮಿತಿ ಸಿದ್ಧವಾಗಿದೆ.**

ಈ ಚುನಾವಣೆಯಲ್ಲಿ ಪ್ರಪ್ರಥಮ ಬಾರಿ ಜಿಲ್ಲಾ ಪ್ರತಿನಿಧಿಗಳ ಚುನಾವಣೆ ನಡೆದಿದ್ದು ಬೆಂಗಳೂರು ಹಾಗೂ ಮೈಸೂರು ಹೊರತುಪಡಿಸಿ ಪ್ರತಿ ಜಿಲ್ಲೆಯಿಂದ ಒಬ್ಬರು ಜಿಲ್ಲಾ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರಿನ ಉತ್ತರದಿಂದ ಇಬ್ಬರು, ಬೆಂಗಳೂರು ಕೇಂದ್ರದಿಂದ ಇಬ್ಬರು, ಬೆಂಗಳೂರು ದಕ್ಷಿಣದಿಂದ ನಾಲ್ವರು ಹಾಗೂ ಮೈಸೂರಿನಿಂದ ಇಬ್ಬರು ಜಿಲ್ಲಾ ಪ್ರತಿನಿಧಿಗಳಾಗಿ ಆಯ್ಕೆ ಯಾಗಿದ್ದಾರೆ. ಸುಮಾರು **ಹದಿಮೂರು ಜಿಲ್ಲಾ ಪ್ರತಿನಿಧಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 26 ಜಿಲ್ಲಾ ಪ್ರತಿನಿಧಿಗಳು ಚುನಾವಣೆ ಎದುರಿಸಿ ಜಯಶೀಲರಾಗಿದ್ದಾರೆ. ಆಯ್ಕೆಯಾದ ಮೂವತ್ತೊಂಭತ್ತು ಜಿಲ್ಲಾ ಪ್ರತಿನಿಧಿಗಳಿಗೂ ಹಾರ್ದಿಕ ಅಭಿನಂದನೆಗಳು.**

**ದಿನಾಂಕ 16–4–2025** ರಂದು ಅಧ್ಯಕ್ಷನಾಗಿ ಜವಾಬ್ದಾರಿ ಸ್ವೀಕರಿಸಿದ ನಂತರ **ಹಿರಿಯ ಉಪಾಧ್ಯಕ್ಷರನ್ನಾಗಿ ಶ್ರೀ ಆರ್. ಲಕ್ಷ್ಮೀಕಾಂತ್ ಅವರನ್ನು, ಕೋಶಾಧ್ಯಕ್ಷರಾಗಿ ಶ್ರೀ ಸುಬ್ಬನರಸಿಂಹ ಅವರನ್ನು ನೇಮಿಸಲಾಯಿತು.**

ಅರೋಗ್ಯ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ನಮ್ಮ ಮುಂದೆ ಬಹಳ ದೊಡ್ಡ ಸವಾಲು ನಿಂತಿದೆ. ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿ ವಸತಿಗೆ ಬಹಳಷ್ಟು ಬೇಡಿಕೆ ಇದೆ. ಇದಲ್ಲದೆ ಸುವರ್ಣಭವನ ನಿರ್ಮಾಣ ಕೆಲಸವನ್ನು ಪ್ರಾರಂಭಿಸಬೇಕಾಗಿದೆ.

ಈ ಎರಡೂವರೆ ತಿಂಗಳಲ್ಲಿ ಸುಮಾರು ಐದುಸಾವಿರ ಕ್ಕೂ ಹೆಚ್ಚು ಸದಸ್ಯತ್ವ ನೋಂದಣಿಯಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ದೇಣಿಗೆ ಸಂಗ್ರಹಿಸುವ ಸಲುವಾಗಿ **ಕಾರ್ಪಸ್ ಫಂಡ್**

ಖಾತೆಯನ್ನು ಬೆಂಗಳೂರಿನ ಕರ್ನಾಟಕ ಬ್ಯಾಂಕಿನಲ್ಲಿ ತೆರೆಯಲಾಗಿದ್ದು ಸುಮಾರು ನಲವತ್ತು ಲಕ್ಷ ರೂಗಳನ್ನು ಸಂಗ್ರಹಿಸಿ ಇಡಲಾಗಿದೆ.

**ಅಕ್ಷಯ ನಿಧಿ ಕಾರ್ಪಸ್ ಫಂಡ್** ಸಂಗ್ರಹ ಖಾತೆಯನ್ನು ಕರ್ನಾಟಕ ಬ್ಯಾಂಕಿನಲ್ಲಿ ತೆರೆಯಲಾಗಿದ್ದು, ಈ ನಿಧಿಗೆ ಐವತ್ತು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಹಣವನ್ನು ದಾನಿಗಳು ನೀಡಬಹುದು. ಈ ಸಂಚಿಕೆಯಲ್ಲಿ ಸ್ಕ್ಯಾನರ್‌ಗಳನ್ನು ನೀಡಲಾಗಿದ್ದು ಇದರ ಮುಖಾಂತರ ಈ ಮೇಲ್ಕಂಡ ಖಾತೆಗಳಿಗೆ ದೇಣಿಗೆ ನೀಡಬಹುದು.

ಸರ್ಕಾರದ ವತಿಯಿಂದ ನಡೆಸಲಾಗುವ ಸಿ.ಇ.ಟಿ ಪರೀಕ್ಷೆ ಬರೆಯಲು ವಿಪ್ರ ವಿದ್ಯಾರ್ಥಿಗಳ ಜನಿವಾರ ಕತ್ತರಿಸಿ ಅಥವಾ ತೆಗೆದುಹಾಕಿ ಬ್ರಾಹ್ಮಣ ಸಮುದಾಯದ ಮೇಲೆ ದೌರ್ಜನ್ಯ ಎಸೆಗಿದ ಘಟನೆಯನ್ನು ತೀವ್ರವಾಗಿ ಖಂಡಿಸಿ ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆದು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳವಂತೆ ಆಗ್ರಹಿಸಲಾಯಿತು. ರಾಜ್ಯದೆಲ್ಲೆಡೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಬ್ರಾಹ್ಮಣ ಮುಖಂಡರುಗಳು ಇದೇ ವಿಚಾರವಾಗಿ ಶಾಂತಿಯುತ ಹೋರಾಟ ಮಾಡಿ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ದೂರು ದಾಖಲಿಸಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದೇ ರೀತಿ ರೈಲ್ವೇ ಪರೀಕ್ಷೆಯಲ್ಲೂ ಗೊಂದಲ ನಿರ್ಮಾಣ ಉಂಟಾದಾಗ ಕೇಂದ್ರ ಸರ್ಕಾರದ ಸಚಿವರ ಗಮನ ಸೆಳೆಯಲಾಗಿ, ಸಚಿವರಾದ ಗೌರವಾನ್ವಿತ ಶ್ರೀ ವಿ. ಸೋಮಣ್ಣನವರು ತಕ್ಷಣವೇ ಕ್ರಮ ಕೈಗೊಂಡಿದ್ದನ್ನು ಸ್ಮರಿಸಬಹುದು. ಅವರಿಗೆ ಅಭಿನಂದನೆಗಳನ್ನು ತಿಳಿಸಲಾಗಿದೆ. ಅಲ್ಲದೇ ಇನ್ನು ಮುಂದೆ ಈ ರೀತಿ ಆಗದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಲಾಗಿದ್ದು, ರಾಜ್ಯ ಸರ್ಕಾರಕ್ಕೆ ನೋಟೀಸ್ ನೀಡಲಾಗಿದ್ದು ಮುಂದಿನ ತಿಂಗಳು ವಿಚಾರಣೆಗೆ ಬರಲಿದೆ.

ಜಿಲ್ಲಾ ಪ್ರತಿನಿಧಿಗಳ ಪಾತ್ರ ಮತ್ತು ಜವಾಬ್ದಾರಿಯ ಬಗ್ಗೆ ಪ್ರಶ್ನೆಗಳು ಉದ್ಭವಿಸಿದೆ ಹಾಗೂ ಇನ್ನೂ ಅನೇಕ ವಿಚಾರಗಳು ಜಿಲ್ಲಾ ಪ್ರತಿನಿಧಿಗಳ ಕೋರಿಕೆಯಾಗಿದ್ದು, ಚಿಂತನೆ ನಡೆಸಬೇಕಾಗಿದೆ. ಇವುಗಳ ಬಗ್ಗೆ ಈಗಾಗಲೇ ಎರಡು ಭಾರಿ ಜಿಲ್ಲಾ ಪ್ರತಿನಿಧಿಗಳ ಸಭೆಯನ್ನು ನಡೆಸಿ ವಿಚಾರ ವಿನಿಮಯ ಮಾಡಿಕೊಳ್ಳಲಾಗಿದೆ.

ಸದ್ಯದಲ್ಲಿ, ಮಹಾಸಭಾದ ಅನೇಕ ಚಟುವಟಿಕೆಗಳು ಯಥಾವತ್ತಾಗಿ ಮುಂದುವರೆದರೂ, ವಿಪ್ರಸಮುದಾಯದ ಸಮಕಾಲೀನ ಸಮಾಜದ ಅವಶ್ಯಕತೆಯನ್ನು ಪೂರೈಸುವಲ್ಲಿ ಕೆಲವು ಹೊಸ ಚಿಂತನೆಗಳನ್ನೂ ಸಹ ಈ ವೇಳೆ ನಡೆಸುವುದು ಅಪೇಕ್ಷಣೀಯವಾಗಿದೆ. ಸನಾತನ ಪರಂಪರೆಯ ಜ್ಞಾನ ಭಂಡಾರ ಹಾಗೂ ಆಧುನಿಕ ತಂತ್ರಜ್ಞತೆಯ ಸಮ್ಮಿಳನಗಳು ಸದ್ಯದಲ್ಲಿ ನಮ್ಮಪಥವಾಗಲಿದೆ. ಸಮಾಜದ ಎಲ್ಲ ವರ್ಗಗಳಲ್ಲಿಯೂ ಲಭ್ಯವಿರುವ ಅನೇಕ ಶ್ರೇಷ್ಠ ಅಂಶಗಳಿಗಿಂತಲೂ ನಮ್ಮ, ತುಸುಭಿನ್ನ ಚಿಂತನೆಯಾದ **'ಸರ್ವೇಜನಾಃ ಸುಖಿನೋ ಭವಂತು'** ಎಂಬ ವಿಶಾಲ ಮನೋಭಾವವು ವಿಪ್ರಸಮುದಾಯದ ಮೂಲಮಂತ್ರವಾಗಿರುವುದರಿಂದಾಗಿ ವಿಪ್ರಸಮುದಾಯವು ಇಂದು 'ವಿಶ್ವಮಾನ್ಯವಾಗಿದೆ'.

ನಮಗೆ –ನಿಮಗೆಲ್ಲ ತಿಳಿದಿರುವಂತೆ ಭಾರತದಲ್ಲಿನ ವಿವಿಧ ಪ್ರದೇಶಗಳಲ್ಲಿ ಅನೇಕ ಬಗೆಯ ವೈವಿಧ್ಯತೆಗಳು ಕಂಡು ಬಂದರೂ, ಸಮಗ್ರಭಾರತವನ್ನು ಒಂದಾಗಿ ಐಕ್ಯಗೊಳಿಸಿರುವ ಸೂತ್ರವೇ **'ಏಕರೂಪದ ಸನಾತನ ಧಾರ್ಮಿಕತೆ'** ಹಾಗೂ ಈ ಧಾರ್ಮಿಕತೆಗೆ ಬೆನ್ನೆಲುಬಾದ 'ಸಂಸ್ಕೃತ ಭಾಷೆಯೇ' ದೇಶದ ಅಖಂಡತೆಗೆ ಕಾರಣವಾಗಿದೆ. ಬಾಹ್ಯ ಸಮಾಜದಲ್ಲಾದರೋ, **'ವಿಪ್ರಸಂಕುಲದ ಮಾತೃ ಭಾಷೆ'** ಎಂದೇ ಬಿಂಬಿತವಾಗಿರುವ ದೇವಭಾಷೆಯಾದ ಸಂಸ್ಕೃತದಿಂದ ಇಂದಿನ ಯುವ ಜನತೆಯು ತುಸು ದೂರವಾಗಿಯೇ ಉಳಿದಿದ್ದರೂ, ಸಂಸ್ಕೃತವು ನಮ್ಮ ಕನ್ನಡ ಭಾಷೆಯಲ್ಲಿಯೂ ಅಂತಸ್ತವಾಗಿ ಪ್ರವಹಿಸುತ್ತಿರುವುದೂ ಒಪ್ಪಬೇಕಾದ ಸಂಗತಿ! ಅಂತೆಯೇ, ವಿಪ್ರಸಮುದಾಯದ ಸಮಗ್ರತೆಗೆ ಮೂಲ ಮಂತ್ರವಾಗಿರುವ ಸಂಸ್ಕೃತ ಭಾಷೆಯ ಅಂತರ್ಗಂಗೆಯ ಪ್ರೋಕ್ಷಣೆ ಇಂದಿನ ನವಸಮಾಜಕ್ಕೆ ಅತ್ಯವಶ್ಯವಿದೆ. ಈ ದಿಸೆಯಲ್ಲಿ, ಮಹಾಸಭಾದ ಹೊಸ ಯೋಜನೆಗಳಾಗಿ ಅಲ್ಲಲ್ಲಿ ಪ್ರಾದೇಶಿಕವಾಗಿ ಸಂಸ್ಕೃತ ಸಂಭಾಷಣಾ ಶಿಬಿರ ಹಾಗೂ ಬಾಲಕ–ಬಾಲಕಿಯರಿಗಾಗಿ ಸರಳ ಸಂಸ್ಕೃತ ಪರೀಕ್ಷೆ, ಪಾರಂಪರಿಕ ಸಾಂಸ್ಕೃತಿಕ ಸ್ಪರ್ಧೆ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಚಿಂತನೆ ಮಹಾಸಭಾಗೆ ಮೂಡಿಬಂದಿದೆ. ಸನಾತನ ಸಂಸ್ಕೃತಿಯ ಔನ್ನತ್ಯಗಳ ಪರಿಚಯಾತ್ಮಕ ಚಟುವಟಿಕೆಗಳು ಹಾಗೂ ವಿದ್ವಜ್ಜನರಿಂದ ಪ್ರಾದೇಶಿಕ ಉಪನ್ಯಾಸಗಳನ್ನೂ ಅಲ್ಲಲ್ಲಿ ಆಗಾಗ ನಡೆಸುವ

ಉದ್ದಿಶ್ಯವೂ ಮಹಾಸಭಾದ ಚಿಂತನೆಯಲ್ಲಿದೆ. ಈ ದಿಸೆಯಲ್ಲಿ ಮಹಾಸಭಾವು ವಿಪ್ರ ಸಮುದಾಯದ ಸಹಕಾರವನ್ನು ಸದಾ ಅಪೇಕ್ಷಿಸುತ್ತದೆ.

ಇತ್ತೀಚೆಗೆ ಭಾಜಪದ ರಾಜ್ಯಾಧ್ಯಕ್ಷರಾದ **ಶ್ರೀ ಬಿ. ವೈ. ವಿಜಯೇಂದ್ರ ರವರು** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಾಲಯ ಗಾಯತ್ರೀ ಭವನಕ್ಕೆ ಭೇಟಿ ನೀಡಿ ಅಭಿನಂದನೆ ಸಲ್ಲಿಸಿ ಮುಂದಿನ ದಿನಗಳಲ್ಲಿ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು ಹಾಗೂ ವಿರೋಧಪಕ್ಷದ ನಾಯಕರು ಹಾಗೂ ಭಾಜಪದ ಹಿರಿಯ ನಾಯಕರಾದ **ಶ್ರೀ ಆರ್. ಅಶೋಕ್** ಹಾಗೂ ಬಿ.ಬಿ.ಎಂ.ಪಿ. ಮಾಜಿ ಸದಸ್ಯರಾದ **ಶ್ರೀ ಬಸವರಾಜ್,** ಇತರರು ಬ್ರಾಹ್ಮಣ ಮಹಾಸಭೆಗೆ ಆಗಮಸಿ ಅಭಿನಂದನೆ ಸಲ್ಲಿಸಿ ಸದಾ ಸಹಕಾರ ನೀಡುವುದಾಗಿ ತಿಳಿಸಿದರು.

ಜುಲೈ 19, 2025 ಶನಿವಾರ ರಾಜ್ಯ ಪ್ರಥಮ ಕಾರ್ಯಕಾರಿಣಿ ಸಭೆಯನ್ನು ಬೆಂಗಳೂರಿನ ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾಂಗಣದಲ್ಲಿ ನಡೆಸಲು ನಿಶ್ಚಯಿಸಲಾಗಿದೆ.

ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ತಮ್ಮೆಲ್ಲರ ಸಹಕಾರವನ್ನು ಹಾಗೂ ಸಹಾಯವನ್ನು ಸದಾ ನಿರೀಕ್ಷಿಸುತ್ತಿರುತ್ತೇನೆ.

ವಂದನೆಗಳೊಂದಿಗೆ,

**ಬೆಂಗಳೂರು** **ಎಸ್. ರಘುನಾಥ್**
**ದಿನಾಂಕ 8–7–2025** **ಅಧ್ಯಕ್ಷರು**

---

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.),

**ಗಾಯಿತ್ರಿ ಭವನ, ನಂ.3070, ಗಾಯಿತ್ರಿ ಭವನ ರಸ್ತೆ, 9ನೇ ಮುಖ್ಯ ರಸ್ತೆ,**
**ಬನಶಂಕರಿ 2ನೇ ಹಂತ, ಬೆಂಗಳೂರು–560070**

## :: ಅಧ್ಯಕ್ಷೀಯ ಚುನಾವಣಾ ಫಲಿತಾಂಶ ಪ್ರಕಟಣೆ ::



**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ),**
**ಗಾಯಿತ್ರಿ ಭವನ, ನಂ. 3070, ಗಾಯಿತ್ರಿ ಭವನ ರಸ್ತೆ, 9ನೇ ಮುಖ್ಯ ರಸ್ತೆ,**
**ಬನಶಂಕರಿ 2ನೇ ಹಂತ, ಬೆಂಗಳೂರು–560070**
**2025–2030ರ ಐದು ವರ್ಷಗಳ ಅವಧಿಗೆ**
**ದಿನಾಂಕ 13–04–2025 ರಂದು**
**ಜರುಗಿದ ಮಹಾಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ**
**ಅಭ್ಯರ್ಥಿಗಳ ಪೈಕಿ ಅತಿ ಹೆಚ್ಚು ಮತಗಳನ್ನು ಪಡೆದು**
**ಅಧ್ಯಕ್ಷ ಸ್ಥಾನಕ್ಕೆ**

## ಶ್ರೀ ರಘುನಾಥ್ ಎಸ್ ರವರು

**ಚುನಾಯಿತರಾಗಿದ್ದಾರೆಂದು ಈ ಮೂಲಕ ಘೋಷಿಸಿ ಪ್ರಕಟಿಸಿದೆ.**

ಸಹಿ/–
ಎನ್. ವೆಂಕಟೇಶ್
**ಮುಖ್ಯ ಚುನಾವಣಾಧಿಕಾರಿಗಳು**
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.),

**ದಿನಾಂಕ :13–04–2025**
**ಸ್ಥಳ: ಬೆಂಗಳೂರು**

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.),

ಗಾಯಿತ್ರಿ ಭವನ, ನಂ.3070, ಗಾಯಿತ್ರಿ ಭವನ ರಸ್ತೆ, 9ನೇ ಮುಖ್ಯ ರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು-560070

**2025-2030ರ ಐದು ವರ್ಷಗಳ ಅವಧಿಗೆ ದಿನಾಂಕ 13-04-2025 ರಂದು ಜರುಗಿದ ಮಹಾಸಭಾ ಜಿಲ್ಲಾ ಪ್ರತಿನಿಧಿಗಳ ಚುನಾವಣೆಯಲ್ಲಿ ಸ್ಪರ್ಧಿಸಿ ಜಿಲ್ಲಾ ಪ್ರತಿನಿಧಿಗಳಾಗಿ ಚುನಾಯಿತರಾದವರು.**

## ಚುನಾಯಿತರಾದ ಜಿಲ್ಲಾ ಪ್ರತಿನಿಧಿಗಳ ಚುನಾವಣಾ ಫಲಿತಾಂಶ ಪ್ರಕಟಣೆ

1. ಬೀದರ್ ಜಿಲ್ಲೆ : ಶ್ರೀ ವೆಂಕಟೇಶ್ ಕುಲಕರ್ಣಿ
2. ಕಲಬುರ್ಗಿ : ಶ್ರೀ ಪ್ರಮೋದ್ ದೇಶಪಾಂಡೆ
3. ಬಾಗಲಕೋಟೆ : ಶ್ರೀ ಗುರುರಾಜ ಹ. ಗೋಂಬಿ
4. ವಿಜಯಪುರ : ಶ್ರೀ ಸತೀಶ್ಚಂದ್ರ ಕುಲಕರ್ಣಿ
5. ಕೊಪ್ಪಳ : ಶ್ರೀ ಗುರುರಾಜ ಜೋಷಿ
6. ರಾಯಚೂರು : ಶ್ರೀ ರಮೇಶ್ ಎ. ಕುಲಕರ್ಣಿ
7. ಧಾರವಾಡ/ಹುಬ್ಬಳ್ಳಿ : ಶ್ರೀ ಲಕ್ಷ್ಮಣ ಚಿದಂಬರ ಕುಲಕರ್ಣಿ
8. ಹಾವೇರಿ : ಶ್ರೀ ದತ್ತಾತ್ರೇಯ ನಾಡಿಗೇರ
9. ದಾವಣಗೆರೆ : ಶ್ರೀ ಸಿ.ಕೆ. ಆನಂದತೀರ್ಥಾಚಾರ್
10. ಚಿತ್ರದುರ್ಗ : ಶ್ರೀ ಟಿ.ಕೆ. ನಾಗರಾಜ ರಾವ್
11. ಶಿವಮೊಗ್ಗ : ಶ್ರೀ ರಘುರಾಮ್ ಎನ್.ಎಂ.
12. ಮೈಸೂರು : ಡಾ. ಲಕ್ಷ್ಮೀದೇವಿ ಕೆ.ವಿ.
    ಶ್ರೀ ಡಿ.ಟಿ. ಪ್ರಕಾಶ್
13. ಮಂಡ್ಯ : ಶ್ರೀ ಶಂಕರನಾರಾಯಣ ಶಾಸ್ತ್ರಿ ಎಸ್.
14. ಚಿಕ್ಕಬಳ್ಳಾಪುರ : ಶ್ರೀ ಪ್ರಕಾಶ್ ಪಿ.ಆರ್.
15. ತುಮಕೂರು : ಶ್ರೀ ಹರೀಶ್ ಹೆಚ್.
16. ಬೆಂಗಳೂರು ದಕ್ಷಿಣ : ಶ್ರೀಮತಿ ಅಂಬಿಕ ರಾಮಚಂದ್ರ
    ಶ್ರೀ ಕೆ. ಸತೀಶ ಉರಾಳ
    ಶ್ರೀ ರವಿಕುಮಾರ್ ಕೆ.ಎನ್.
    ಶ್ರೀ ರಾಜಶೇಖರ ಆರ್. ಜಿ.
17. ಬೆಂಗಳೂರು ಉತ್ತರ : ಶ್ರೀ ದಿಲೀಪ್ ಕುಮಾರ್ ಎ
    ಶ್ರೀ ನಾಗೇಶ್ ಜಿ.ಎಸ್.
18. ಬೆಂಗಳೂರು ಕೇಂದ್ರ : ಶ್ರೀ ಶ್ರೀನಿವಾಸ ಪಿ.ಆರ್.
    ಶ್ರೀ ಪ್ರಸಾದ್ ಎಸ್.ಎಸ್.
19. ಬೆಂಗಳೂರು ಗ್ರಾಮಾಂತರ : ಶ್ರೀ ಮಂಜುನಾಥ ಕೆ.
20. ಕೋಲಾರ : ಶ್ರೀ ಆನಂದಮೂರ್ತಿ ಕೆ.ಎನ್.

### ಜಿಲ್ಲಾವಾರು ಅವಿರೋಧವಾಗಿ ಆಯ್ಕೆಯಾದ ಜಿಲ್ಲಾ ಪ್ರತಿನಿಧಿಗಳ ಪಟ್ಟಿ

21. ಯಾದಗಿರಿ : ಶ್ರೀ ಪ್ರಾಣೇಶ ನಾರಾಯಣರಾವ್ ದೇಶಪಾಂಡೆ
22. ಬಳ್ಳಾರಿ : ಶ್ರೀ ಡಾ. ಡಿ. ಶ್ರೀನಾಥ್
23. ವಿಜಯನಗರ : ಶ್ರೀ ದಿವಾಕರ ಕೆ.
24. ಗದಗ : ಶ್ರೀ ಶ್ರೀನಿವಾಸ ಹುಯಿಲಗೋಳ
25. ಬೆಳಗಾವಿ : ಶ್ರೀ ಅಕ್ಷಯ ಪಾಂಡುರಂಗ ಕುಲಕರ್ಣಿ
26. ಉಡುಪಿ : ಶ್ರೀ ಕೃಷ್ಣಾನಂದ ಛಾತ್ರ
27. ದಕ್ಷಿಣ ಕನ್ನಡ : ಶ್ರೀ ಮಹೇಶ್ ಕಜೆ
28. ಚಾಮರಾಜನಗರ : ಶ್ರೀ ಬಾಲಸುಬ್ರಮಣ್ಯ ಎಸ್.
29. ಕೊಡಗು : ಶ್ರೀ ಹೆಚ್.ಆರ್. ದುರ್ಗಾಪ್ರಸಾದ್
30. ಹಾಸನ : ಶ್ರೀ ವೆಂಕಟೇಶ ಪಿ.ಎಸ್.
31. ಚಿಕ್ಕಮಗಳೂರು : ಶ್ರೀ ಮಹಾಬಲ ಜಿ.ಎಸ್.
32. ರಾಮನಗರ : ಶ್ರೀ ರಾಘವೇಂದ್ರ ಮಯ್ಯ
33. ಉತ್ತರ ಕನ್ನಡ : ಶ್ರೀ ಶ್ರೀಪಾದನಾರಾಯಣ ರಾಯ್ಸದ

ಸಹಿ/-
ಮುಖ್ಯ ಚುನಾವಣಾಧಿಕಾರಿಗಳು
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.),

ದಿನಾಂಕ : 13-04-2025
ಸ್ಥಳ: ಬೆಂಗಳೂರು

ಚುನಾಯಿತರಾದ ಜಿಲ್ಲಾ ಪ್ರತಿನಿಧಿಗಳಿಗೆ ಹಾಗೂ ಅವಿರೋಧವಾಗಿ ಆಯ್ಕೆಯಾದ ಜಿಲ್ಲಾ ಪ್ರತಿನಿಧಿಗಳಿಗೆ ಅಭಿನಂದನೆಗಳು

# ಪ್ರಕಟಣೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾಗಿ **ಶ್ರೀ ಎಸ್. ರಘುನಾಥ್ ರವರು** ಜವಾಬ್ದಾರಿ ವಹಿಸಿಕೊಂಡ ದಿನಾಂಕ 16.04.2025ರಂದು ಮಹಾಸಭೆಯ ಹಿರಿಯ ಸದಸ್ಯರೂ, ಮಾಜಿ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀ **ಆರ್. ಲಕ್ಷ್ಮೀಕಾಂತ್‌ರವರನ್ನು ಹಿರಿಯ ಉಪಾಧ್ಯಕ್ಷ**ರನ್ನಾಗಿ ಹಾಗೂ ಶ್ರೀ **ಸುಬ್ಬನರಸಿಂಹರವರನ್ನು ಮಹಾಸಭೆಯ ಖಜಾಂಚಿ**ಗಳನ್ನಾಗಿ ನೇಮಕ ಮಾಡಿರುತ್ತಾರೆ.



**ಆರ್. ಲಕ್ಷ್ಮೀಕಾಂತ್ – ಹಿರಿಯ ಉಪಾಧ್ಯಕ್ಷರು**



**ಸುಬ್ಬನರಸಿಂಹ – ಖಜಾಂಚಿಗಳು**




AKBMS Corpus Account
Acc Name :
Akhila Karnataka Brahmana Mahasabha Corpus fund
Bank : Karnataka Bank Ltd
A/c No : 0107252500017801 IFSC : KARB0000107
BRANCH : BANASHANKARI 2ND STAGE




AKBMS Akshaya Nidhi Account
Acc Name : Akshaya Nidhi Corpus fund
Bank : Karnataka Bank Ltd
A/c No : 0107252500018301
IFSC : KARB0000107
BRANCH : BANASHANKARI 2ND STAGE

# ಬ್ರಾಹ್ಮಣರ ನಿಂದನೆ, ಅಪಮಾನ ಸಹಿಸುವುದಿಲ್ಲ: ಮಹಾಸಭಾಧ್ಯಕ್ಷ ಶ್ರೀ ಎಸ್. ರಘುನಾಥ್



ಸಿಇಟಿ ವಿದ್ಯಾರ್ಥಿಗಳ ಮೇಲೆ ನಡೆದ ಇಂತಹ ಕಹಿ ಘಟನೆಗಳು ನಡೆಯದಂತೆ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರಿಗೆ ಮನವಿ ಮಾಡಲಾಗಿದೆ. ಶಿಕ್ಷಣ ಸಚಿವರು ಆ ವಿದ್ಯಾರ್ಥಿಗೆ ಮರು ಪರೀಕ್ಷೆ ಬರೆಯಲು ಅವಕಾಶ ನೀಡುತ್ತೇವೆ ಎಂದು ಹೇಳಿದ್ದಾರೆ ಮತ್ತು ಸಿ.ಇ.ಟಿ. ಪ್ರಾಧಿಕಾರವು ಕ್ರಮಕೈಗೊಳ್ಳಲಾಗುತ್ತದೆ ಎಂದು ಹೇಳಿರುವುದು ಸಮಾಧಾನಕರ ಸಂಗತಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಎಸ್. ರಘುನಾಥ್ ತಿಳಿಸಿದರು.

ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸಿ.ಇ.ಟಿ. ಪರೀಕ್ಷೆಯಲ್ಲಿ ಜನಿವಾರ ತೆಗೆದು ಪರೀಕ್ಷೆ ಬರೆಯುವಂತೆ ವಿದ್ಯಾರ್ಥಿಗೆ ಹೇಳಿರುವುದು ವಿಪ್ರ ಸಮುದಾಯಕ್ಕೆ ಮಾಡಿರುವ ಅಪಮಾನ ಎಂದು ಖಂಡನೆ ವ್ಯಕ್ತಪಡಿಸಿ, ಮಾಧ್ಯಮಗೋಷ್ಠಿ ಏರ್ಪಡಿಸಿ ಮಾತನಾಡಿ, ಸಮಾಜವನ್ನು ಹೀಯಾಳಿಸುವುದು, ನಿಂದಿಸುವುದು, ಅಪಹಾಸ್ಯಕ್ಕೆ ಒಳಪಡಿಸುವುದು ಮತ್ತು ಬ್ರಾಹ್ಮಣರ ಮೇಲೆ ದೌರ್ಜನ್ಯ ವೆಸಗುವುದು ಸಾಮಾನ್ಯವಾಗಿದೆ. ಬ್ರಾಹ್ಮಣರು ಅಲ್ಪಸಂಖ್ಯಾತ ರಾಗಿದ್ದಾರೆ. ಜನಿವಾರ ಕಿತ್ತು ಹಾಕಿರುವುದರಿಂದ ಬ್ರಾಹ್ಮಣ ಸಮುದಾಯವು ರಾಜ್ಯಾದ್ಯಂತ ಆಕ್ರೋಶ ವ್ಯಕ್ತಪಡಿಸುತ್ತಿದೆ. ಎಲ್ಲಾ ಕಡೆಗಳಲ್ಲಿ ಪ್ರತಿಭಟನೆಯಾಗುತ್ತಿದೆ. ವಿಪ್ರ ಸಮುದಾಯಕ್ಕೆ ಆಗಿರುವ ನೋವು, ಸಂಕಷ್ಟಗಳು ಸಮಸ್ಯೆಗಳನ್ನು ಎದುರಿಸುತ್ತಿರುವ ಕುರಿತು ಮಹಾಸಭಾದಿಂದ ಮುಖ್ಯಮಂತ್ರಿ ಗಳಿಗೆ ಮನವಿ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಿ.ಇ.ಟಿ. ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಬ್ರಾಹ್ಮಣ ವಿದ್ಯಾರ್ಥಿಗೆ ಶಿಕ್ಷಣಕ್ಕೆ ಬೇಕಾದ ಆರ್ಥಿಕ ಸಹಾಯ ಮಹಾಸಭಾದಿಂದ ನೀಡಲಾಗುವುದು. ಆ ವಿದ್ಯಾರ್ಥಿಯು ನಮ್ಮ ಸಂಪ್ರದಾಯ ಹಾಗೂ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದಾನೆ ಎಂದು ಹೇಳಿದರು.

ಮಹಾಸಭೆಯ ಹಿರಿಯ ಉಪಾಧ್ಯಕ್ಷ ಶ್ರೀ ಆರ್.ಲಕ್ಷ್ಮೀಕಾಂತ್ ಅವರು ಮಾತನಾಡಿ ಯಾರು ಏನು ಬೇಕಾದರು ಬ್ರಾಹ್ಮಣರ ಮೇಲೆ ದಬ್ಬಾಳಿಕೆ ಮಾಡಬಹುದು ಎಂದು ತಿಳಿದಿದ್ದಾರೆ. ಜನಿವಾರ ವಿವಾದದಿಂದ ಇಡೀ ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಪರೀಕ್ಷೆ ಬರೆಯಲು ಲಕ್ಷಾಂತರ ವಿದ್ಯಾರ್ಥಿಗಳು ಬರುತ್ತಾರೆ. ಅದರಲ್ಲೂ ಬ್ರಾಹ್ಮಣ ವಿದ್ಯಾರ್ಥಿಗೆ ಈ ತರಹ ಪರಿಶೀಲಿಸಬೇಕೆಂಬುದು ಪೂರ್ವ ನಿಯೋಜಿತ ಸಂಚು ಎಂದು ಕಾಣುತ್ತದೆ. ಸಂವಿಧಾನದಲ್ಲಿ ಬ್ರಾಹ್ಮಣರಿಗೆ ಅಪಮಾನ, ತೇಜೋವಧೆ ಮಾಡಿದರೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಹೇಳಿದರು.

ಸರ್ಕಾರ ಇಂತಹ ಘಟನೆಗಳ ವಿರುದ್ಧ ತತ್‌ಕ್ಷಣ ಕ್ರಮ ಕೈಗೊಳ್ಳಬೇಕು. ಹೋಂ ಗಾರ್ಡ್ ಕೆಲಸದ ಆದೇಶ ಪಾಲಿಸುತ್ತಾನೆ ಅವನನ್ನು ಬಲಿಪಶು ಮಾಡುವ ಬದಲು ಅಧಿಕಾರಿಗಳ ತಲೆದಂಡವಾಗಬೇಕು. ನಿರ್ದೇಶಕ ಅನುರಾಗ್ ಕಶ್ಯಪ್‌ರವರು ಬ್ರಾಹ್ಮಣರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸುತ್ತೇವೆ. ಅವರ ಮೇಲೆ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು. ಬ್ರಾಹ್ಮಣರು ಸಮಾಜ, ದೇಶ ಜನರಿಗೆ ಒಳ್ಳೆಯದಾಗಬೇಕು ಎಂದು ಪೂಜೆ, ಹೋಮ–ಹವನ ಮಾಡುತ್ತಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಎಸ್. ರಘುನಾಥ್, ಹಿರಿಯ ಉಪಾಧ್ಯಕ್ಷರಾದ ಆರ್. ಲಕ್ಷ್ಮೀಕಾಂತ್, ಜಿಲ್ಲಾ ಪ್ರತಿನಿಧಿಗಳಾದ ಜಿ.ಎಸ್. ನಾಗೇಶ್, ಸತೀಶ್ ಉರಾಳ್, ಕೆ.ಎನ್. ರವಿಕುಮಾರ್, ಅಂಬಿಕಾ ರಾಮಚಂದ್ರ, ಮಂಜುನಾಥ ಹಾಗೂ ವಿಪ್ರ ಮುಖಂಡರುಗಳು, ರವಿಶಂಕರ್, ಶಂಕರ ನಾರಾಯಣ ಶಾಸ್ತ್ರಿ, ಶ್ರೀನಿವಾಸಮೂರ್ತಿ ಮತ್ತು ಜೋಯಿಸ್ ಉಪಸ್ಥಿತರಿದ್ದರು.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)
# 2025–30ನೇ ಸಾಲಿನ ಪ್ರಥಮ ಕೇಂದ್ರ ಕಾರ್ಯಕಾರಿಣಿ ಸಭೆ–ವರದಿ







**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ನೂತನ 2025–2030ನೇ ಸಾಲಿನ ಪ್ರಥಮ ಕೇಂದ್ರ ಕಾರ್ಯಕಾರಿಣಿ ಸಭೆಯು ಬಬ್ಬೂರು ಕಮ್ಮೆ ಸೇವಾ ಸಮಿತಿಯ ಸಭಾಂಗಣ, ಶೇಷಾದ್ರಿರಸ್ತೆ, ಬೆಂಗಳೂರು–09. ಇಲ್ಲಿ ದಿನಾಂಕ 19–07–2025ನೇ ಶನಿವಾರ ದಂದು ಮಹಾಸಭೆಯ ನೂತನ ಅಧ್ಯಕ್ಷರಾದ ಶ್ರೀ ಎಸ್. ರಘುನಾಥ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.** ರಾಜ್ಯದಾದ್ಯಂತ ಚುನಾಯಿತ ರಾದ ಜಿಲ್ಲಾ ಪ್ರತಿನಿಧಿಗಳು, ಅವಿರೋಧವಾಗಿ ಆಯ್ಕೆಯಾದ ಜಿಲ್ಲಾ ಪ್ರತಿನಿಧಿಗಳು, ಮಾನ್ಯ ಅಧ್ಯಕ್ಷರಿಂದ ನೇಮಕಗೊಂಡ ರಾಜ್ಯ ಉಪಾಧ್ಯಕ್ಷರು, ರಾಜ್ಯ ಸಂಘಟನಾ ಕಾರ್ಯದರ್ಶಿಗಳು, ರಾಜ್ಯ ಜಂಟಿ ಕಾರ್ಯದರ್ಶಿಗಳು, ಕೇಂದ್ರಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ವಿಶೇಷ ಆಹ್ವಾನಿತರು ಈ ಸಭೆಗೆ ದಯಮಾಡಿಸಿದ್ದರು.

ವಿಷಯಸೂಚಿಯಂತೆ ಸಭೆಯ ಕಾರ್ಯಕಲಾಪಗಳು ನಡೆದವು. 453ಕ್ಕೂ ಹೆಚ್ಚು ಸದಸ್ಯರು ಹಾಜರಾತಿ ರಿಜಸ್ಟರ್‌ನಲ್ಲಿ ಸಹಿಮಾಡಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ವೇದಘೋಷ, ಪ್ರಾರ್ಥನೆಯೊಂದಿಗೆ ಸಭೆಯು ಆರಂಭವಾಯಿತು. ಮಹಾಸಭಾದ ಹಿರಿಯ ಉಪಾಧ್ಯಕ್ಷರಾದ ಶ್ರೀ ಆರ್. ಲಕ್ಷ್ಮೀಕಾಂತ್‌ರವರು ಸಂಪ್ರದಾಯದಂತೆ ಮಹಾಸಭಾ ಅಧ್ಯಕ್ಷರಿಗೆ ಗಾಯತ್ರೀ ಮಾತೆ ಪದಕವಿರುವ ತುಳಸೀಹಾರವನ್ನು ತೊಡಿಸಿ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡುವಂತೆ ಸ್ವಾಗತ ಕೋರಿದರು. ಖಜಾಂಚಿಯಾಗಿ ನೇಮಕಗೊಂಡಿರುವ ಶ್ರೀ ಸುಬ್ಬನರಸಿಂಹರವರನ್ನು, ವಿಶೇಷ ಆಹ್ವಾನಿತರಾಗಿ ಆಗಮಿಸಿದ ಸರ್ವರನ್ನೂ, ರಾಜ್ಯ ಉಪಾಧ್ಯಕ್ಷರು, ಜಿಲ್ಲಾ ಪ್ರತಿನಿಧಿಗಳು, ಸಂಘಟನಾ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಕಾರ್ಯ ಕಾರಿಣಿ ಸಮಿತಿಯ ಸದಸ್ಯರನ್ನು ಸಭೆಗೆ ಹೃತ್ಪೂರ್ವಕ ವಾಗಿ ಸ್ವಾಗತಿಸಿದರು.

ಅಧ್ಯಕ್ಷರು ಹಾಗೂ ಗಣ್ಯರಿಂದ ದೀಪ ಪ್ರಜ್ವಲಿಕೆಯೊಂದಿಗೆ ಸಭೆಯು ಉದ್ಘಾಟನೆಗೊಂಡಿತು. ಮಹಾಸಭಾದ ಹಿಂದಿನ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಪದಾಧಿಕಾರಿ ಗಳನ್ನು ಶ್ರೀ ಆರ್. ಲಕ್ಷ್ಮೀಕಾಂತ್‌ರವರು, ಅಧ್ಯಕ್ಷರ ಹಾಗೂ ಸಭೆಯ ಪರವಾಗಿ ಅಭಿನಂದಿಸಿದರು. ಉತ್ತಮ ಸಂಘಟನೆ ಮಾಡಿ, ಸುವರ್ಣ ಸಂಭ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದಕ್ಕೆ ಮತ್ತೊಮ್ಮೆ ಅಭಿನಂದನೆ ಸಲ್ಲಿಸಿದರು. ಸಭೆಯು ಸರ್ವಾನುಮತ ದಿಂದ ಇದಕ್ಕೆ ಅನುಮೋದನೆ ನೀಡಿತು.

ರಾಜ್ಯದ ನಾನಾ ಜಿಲ್ಲೆಗಳಿಂದ ಬಂದ ಸದಸ್ಯರು ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿ ಸಂಘಟನೆ ಇತ್ಯಾದಿ ವಿಷಯಗಳ ಬಗ್ಗೆ ಅಧ್ಯಕ್ಷರಿಗೆ ಅಹವಾಲು ತಿಳಿಸಿದರು ಹಾಗೂ ಸೂಕ್ತ ಸಲಹೆ–ಸೂಚನೆಗಳನ್ನು ತಿಳಿಸಿದರು. ಪ್ರತಿಭಾ ಪುರಸ್ಕಾರ, ವಿಪ್ರನುಡಿ ಮರು ಪ್ರಕಟಣೆ, ವಿದ್ಯಾರ್ಥಿವೇತನ, ಸದಸ್ಯತ್ವ ಅಭಿಯಾನ, ಕಾರ್ಪಸ್‌ನಿಧಿ, ಅಕ್ಷಯನಿಧಿ ಯೋಜನೆ, ಆರೋಗ್ಯ–ಶಿಕ್ಷಣ ಮುಂತಾದ ಪ್ರಚಲಿತ ವಿಷಯಗಳನ್ನು ಪ್ರಸ್ತಾಪಿಸಿ ಅಧ್ಯಕ್ಷರ ಗಮನ ಸೆಳೆದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಶಾಸಕರುಗಳಾದ ಶ್ರೀ ರವಿಸುಬ್ರಹ್ಮಣ್ಯ, ಶ್ರೀ ಉದಯ ಗರುಡಾಚಾರ್, ಶ್ರೀ ಸಿ.ಕೆ. ರಾಮಮೂರ್ತಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಅಸಗೋಡು ಜಯಸಿಂಹ, ಡಾ॥ ಎ.ವಿ. ಪ್ರಸನ್ನ, ಶ್ರೀ ಗೌರೀಶಂಕರ್, ಶ್ರೀ ಸತ್ಯಧ್ಯಾನಾಚಾರ್ಯ ಕಟ್ಟಿ, ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ, ಮಾಜಿ ಶಾಸಕರಾದ ಶ್ರೀ ಪ್ರಸನ್ನ ಕುಮಾರ್ ಮಾತನಾಡಿ ಮಹಾಸಭೆಯು ಶ್ರೀ ರಘುನಾಥ್‌ರವರ





ಅಧ್ಯಕ್ಷತೆಯಲ್ಲಿ ನಡೆಯುವ ಎಲ್ಲಾ ಕಾರ್ಯಯೋಜನೆಗಳಿಗೆ ತಾವು ಎಲ್ಲಾ ರೀತಿಯ ಸಹಾಯ–ಸಹಕಾರ–ಸಲಹೆ– ಸೂಚನೆ ಹಾಗೂ ಬೆಂಬಲ ನೀಡುವುದಾಗಿ ತಿಳಿಸಿದರು.

ಮಹಾಸಭಾ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಚುನಾವಣೆಯಲ್ಲಿ ತಮ್ಮನ್ನು ಜಯಶೀಲರನ್ನಾಗಿ ಮಾಡಿದ ಎಲ್ಲರಿಗೂ ಕೃತಜ್ಞತಾಪೂರ್ವಕ ನಮನಗಳನ್ನು ತಿಳಿಸಿದರು. ಆಯ್ಕೆಯಾದ ಹಾಗೂ ಅವಿರೋಧವಾಗಿ ಚುನಾಯಿತರಾದ ಎಲ್ಲಾ ಜಿಲ್ಲಾ ಪ್ರತಿನಿಧಿಗಳಿಗೆ ಅಭಿನಂದನೆ ಸಲ್ಲಿಸಿದರು. ಹಿರಿಯ ಉಪಾಧ್ಯಕ್ಷರಾದ ಶ್ರೀ ಆರ್. ಲಕ್ಷ್ಮೀಕಾಂತ್ ಹಾಗೂ ಖಜಾಂಚಿಗಳಾದ ಶ್ರೀ ಸುಬ್ಬನರಸಿಂಹರವರನ್ನು ಅಭಿನಂದಿಸಿ ಸಭೆಗೆ ಸ್ವಾಗತವನ್ನು ಕೋರಿದರು. ತಾವು ಅಧ್ಯಕ್ಷರಾಗಿ ಪದಗ್ರಹಣ ಮಾಡಿದ ನಂತರ ಹಿರಿಯ ಉಪಾಧ್ಯಕ್ಷ, ಖಜಾಂಚಿ, ರಾಜ್ಯ ಉಪಾಧ್ಯಕ್ಷರು, ಸಂಘಟನಾ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು ಹಾಗೂ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ನೇಮಕ ಮಾಡಿರುವುದಾಗಿ ತಿಳಿಸಿದರು. ನೇಮಕಾತಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆ–ತಾಲ್ಲೂಕುಗಳಿಗೆ ಪ್ರಾತಿನಿಧ್ಯ ಕೊಟ್ಟಿರುವುದಾಗಿ ತಿಳಿಸಿದರು. ಕಾರ್ಪಸ್‌ನಿಧಿ, ಅಕ್ಷಯನಿಧಿ ಯೋಜನೆಗಳಿಗೆ ಉದಾರವಾಗಿ ದೇಣಿಗೆ ನೀಡುವಂತೆ ಕೋರಿದರು. ಕಾರ್ಪಸ್‌ನಿಧಿ ರೂ. 100 ಕೋಟಿ ಜಮೆಯಾದಾಗ, ವಿಪ್ರ ಬಾಂಧವರ ಶಿಕ್ಷಣ, ಆರೋಗ್ಯ, ಮಾಸಾಶನ, ವೈದ್ಯಕೀಯ ಸೌಲಭ್ಯ ಇತ್ಯಾದಿ ಅವಶ್ಯಕತೆಗಳಿಗೆ ನಿಧಿಯಿಂದ ಬರುವ ಬಡ್ಡಿಯ ಆದಾಯದಿಂದ ಸಹಾಯ–ಸಹಕಾರ ನೀಡಲು ಸಾಧ್ಯವಾಗುವುದಾಗಿ ತಿಳಿಸಿದರು. ಮುಂದಿನ ಕಾರ್ಯಯೋಜನೆಗಳ ಬಗ್ಗೆ ವಿಷದವಾಗಿ ತಿಳಿಸಿದರು. ರಾಜ್ಯದಾದ್ಯಂತ ವಿವಿಧ ಜಿಲ್ಲೆ–ತಾಲ್ಲೂಕುಗಳ ಸಂಘ–ಸಂಸ್ಥೆಗಳು, ಮಹಾಸಭಾ ಅಂಗ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಘಟನೆ–ಸ್ವಾವಲಂಬನೆ–ಸಂಸ್ಕಾರದಡಿಯಲ್ಲಿ ಕಾರ್ಯೋನ್ಮುಖರಾಗಬೇಕೆಂದು ತನ್ಮೂಲಕ ವಿಪ್ರ ಬಾಂಧವರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸಬೇಕೆಂದು ಕರೆ ನೀಡಿರುವುದಾಗಿ ತಿಳಿಸಿದರು. ಮುಂದಿನ ಕಾರ್ಯಯೋಜನೆಗಳಿಗೆ ಸದಸ್ಯರ ಸಹಾಯ–ಸಹಕಾರವನ್ನು ಕೋರಿದರು. **ಈಗಾಗಲೇ ದಾನಿಗಳು ಸುಮಾರು 50 ಲಕ್ಷ ರೂಗಳನ್ನು ಕಾರ್ಪಸ್‌ನಿಧಿಗೆ ದೇಣಿಗೆ ನೀಡಿರುವುದಾಗಿ, ಹಾಗೂ ಪ್ರಸ್ತುತ ಸುಮಾರು 6,000 ಹೊಸ ಸದಸ್ಯರು ಆಜೀವ ಸದಸ್ಯರಾಗಿ ನೋಂದಣಿಯಾಗಿದ್ದಾರೆಂದು ಸಭೆಗೆ ತಿಳಿಸಿದರು.** ಸಭೆಯು ಕರತಾಡನದೊಂದಿಗೆ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಯಶಸ್ವೀ ನಡೆಗೆ ಸಂತೋಷವನ್ನು ಸೂಚಿಸಿತು. ಸಾಧಕ ಭಾದಕಗಳನ್ನು ಪರ್ಯಾವಲೋಕಿಸಿ **"ವಿಪ್ರನುಡಿ" ಮಾಸ ಪತ್ರಿಕೆಯನ್ನು ಆಜೀವ ಸದಸ್ಯರೆಲ್ಲರಿಗೂ ತಲುಪಿಸುವುದಾಗಿ ತಿಳಿಸಿದರು.**

ಮಾನ್ಯ ಅಧ್ಯಕ್ಷರು ಅಂಕಿ–ಅಂಶಗಳೊಂದಿಗೆ ಸಭೆಯಲ್ಲಿ ತಮ್ಮ ಕಾರ್ಯಯೋಜನೆ–ವಿಧಾನಗಳನ್ನು ಮಂಡಿಸಿದರು.

ಇತ್ತೀಚೆಗೆ ನಮ್ಮನ್ನಗಲಿದ ಸಮಾಜದ ದುರೀಣರು, ಸದಸ್ಯರ ಆತ್ಮಕ್ಕೆ ಶಾಂತಿ ಕೋರಿ 2 ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

**ಶಾಂತಿ–ಸಂಯಮದಿಂದ ಬಹಳ ಅಚ್ಚುಕಟ್ಟಾಗಿ ಸಭೆಯು ನಡೆದು, ಖಜಾಂಚಿಗಳಾದ ಶ್ರೀ ಸುಬ್ಬನರಸಿಂಹರವರು ಎಲ್ಲರಿಗೂ ವಂದನಾರ್ಪಣೆ ಮಾಡಿ ವಿಶೇಷವಾಗಿ ಉಚಿತವಾಗಿ ಸ್ಥಳವನ್ನು ನೀಡಿದ ಬೆಂಗಳೂರಿನ ಬಬ್ಬೂರುಕಮ್ಮೆ ಸೇವಾಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಕೃತಜ್ಞತಾಪೂರ್ವಕ ನಮನಗಳನ್ನು ಸಲ್ಲಿಸಿ ಅಭಿನಂದನೆಗೈದರು.**

ನಂತರ ಶುಚಿ–ರುಚಿಯಾದ ಬಾಳೇಎಲೆಯ ಊಟದೊಂದಿಗೆ ಸಭೆಯು ಸಂಪನ್ನಗೊಂಡಿತು.



# ಚಾತುರ್ಮಾಸ್ಯದ ಹಿರಿಮೆ

**ಜುಲೈ 17 ರಿಂದ ಚಾತುರ್ಮಾಸ ಪ್ರಾರಂಭ ಈ ಹಿನ್ನೆಲೆಯಲ್ಲಿ ಒಂದು ಹೀಗೊಂದು ಚಿಂತನೆ**



**ಡಾ॥ ಗುರುರಾಜ ಪೋಶೆಟ್ಟಿಹಳ್ಳಿ**
**ಸಂಸ್ಕೃತಿ ಚಿಂತಕರು 9739369621**

**ವರ್ಷ ಒಂದರಲ್ಲಿ ಮಾಸಗಳು (ತಿಂಗಳುಗಳು) ಹನ್ನೆರಡು. ಅವುಗಳಲ್ಲಿ ನಾಲ್ಕು ಮಾಸಗಳೇ "ಚಾತುರ್ಮಾಸ". ಈ ನಾಲ್ಕು ತಿಂಗಳುಗಳು ಭಗವಂತನಿಗೆ ಅತ್ಯಂತ ಪ್ರಿಯ. ಈ ಮಾಸಗಳು ಭಗವಂತನಿಗೆ ಪ್ರಿಯ ಎಂಬ ಮಾತು ಭಗವಂತನಿಂದಲೇ ಹೇಳಲ್ಪಟ್ಟದ್ದು. ಅಂತೆಯೇ ಅದಕ್ಕೆ ಹೆಚ್ಚು ಮಹತ್ವ.**

ಒಂದು ವರ್ಷದಲ್ಲಿ ಎರಡು ಭಾಗ. ಆಷಾಡ ಮಾಸದಿಂದ ಮುಂದೆ ಆರು ತಿಂಗಳ ಕಾಲ ದಕ್ಷಿಣಾಯಣ, ಪುಷ್ಯಮಾಸದಿಂದ ಆರು ತಿಂಗಳು ಉತ್ತರಾಯಣ ಕಾಲ. ದೇವತೆಗಳ ಹಗಲು ಉತ್ತರಾಯಣಕಾಲ. ರಾತ್ರಿ ದಕ್ಷಿಣಾಯನಕಾಲ. ಚಾಂದ್ರಮಾನ ದಂತೆ ಎರಡು ವಿಧ. ಪ್ರತಿ ಶುಕ್ಲಪಕ್ಷದ ಪ್ರತಿಪದೆಯಿಂದ ಅಮಾವಾಸ್ಯೆಗೆ ಒಂದು ಮಾಸ. ಅಥವಾ ಪ್ರತಿ ಕೃಷ್ಣಪಕ್ಷದ ಪ್ರತಿಪದೆಯಿಂದ ಹುಣ್ಣಿಮೆವರೆಗೆ ಒಂದು ಮಾಸ. ಚಾತುರ್ಮಾಸ್ಯದ ನಾಲ್ಕು ತಿಂಗಳ ಅವಧಿಯಲ್ಲಿ ವರ್ಷ ಋತು ಹಾಗೂ ಶರದ್ ಋತುಗಳು ಕಾಣಿಸಿಕೊಳ್ಳುತ್ತದೆ. ಆಷಾಡಮಾಸದ ಶಯನೈಕಾದಶಿಯಂದು ಯೋಗನಿದ್ರೆ ಸ್ವೀಕರಿಸುವ ಭಗವಂತ ಏಳುವುದು ಉತ್ಥಾನ ದ್ವಾದಶಿಯಂದು. ಬಲಮಗ್ಗುಲಿಂದ ಎಡಕ್ಕೆ ತಿರುಗುವ ಸಮಯವೇ ಭಾದ್ರಪದ ಶುಕ್ಲ ದ್ವಾದಶಿ. ಈ ಸಮಯ ದಲ್ಲಿ ಆಕಾಶವು ಮೋಡರಹಿತವಾಗಿ ಮಳೆ ನಿಂತಿರುತ್ತದೆ.

ಚಾತುರ್ಮಾಸದ ಕಾಲದಲ್ಲಿ ಮಳೆ ಹೆಚ್ಚು ಸುರಿಯುವ ಕಾಲ. ಈ ಕಾಲದಲ್ಲಿ ಕ್ರಿಮಿ, ಕೀಟಗಳು, ಜಂತುಗಳು ಉತ್ಪತ್ತಿಯು ಹೆಚ್ಚು ಕಾಣುತ್ತದೆ. ಇದು ಪ್ರಕೃತಿಯ ನಿಯಮ. ಈ ಕಾಲದಲ್ಲಿ ದುಡಿತಕ್ಕೆ ವಿರಾಮ ಕೊಡುವ ಕಾಲ. ಕ್ರಿಮಿಕೀಟಗಳಿಗೆ ಹಿಂಸೆ ಆಗಬಾರ ದೆಂಬ ಹಿನ್ನೆಲೆಯಲ್ಲಿ ಅಹಿಂಸಾ ಧರ್ಮವನ್ನು ಆಶ್ರಯಿಸಿ ಪ್ರಾಯಃ ಎಲ್ಲರೂ ಈ ಚಾತುರ್ಮಾಸ್ಯ ವ್ರತವನ್ನು ಕಡ್ಡಾಯವಾಗಿ ಆಚರಿಸುವ ಪದ್ಧತಿ ಇದೆ. ಹಿಂಸೆ ಕೊಡದ ಎಲ್ಲ ಪ್ರಾಣಿಗಳ ಅಂತರ್ಯಾಮಿಯಾದ ಭಗವಂತನನ್ನು ವಿಶೇಷವಾಗಿ ಆರಾಧಿಸುವ ಸಂದರ್ಭವೇ ಚಾತುರ್ಮಾಸ್ಯಕಾಲ. ಈ ನಾಲ್ಕು ತಿಂಗಳಲ್ಲಿ ಅನೇಕ ವ್ರತಗಳನ್ನು ಆಚರಿಸುತ್ತಾ ಭಗವಂತನ ಆಜ್ಞೆಯಂತೆ ಅವನಿಗೋಸ್ಕರ (ನಮ್ಮ ಉದ್ಧಾರಕ್ಕೋಸ್ಕರ ಎಂಬುದನ್ನು ಮರೆಯಬಾರದು.) ನಾನಾವಿಧ ರುಚಿ ಪದಾರ್ಥ ಗಳನ್ನು ವರ್ಜಿಸುವ ಮೂಲಕ ಏನನ್ನಾದರೂ ಬಿಟ್ಟೇವು.

ಚಾತುರ್ಮಾಸ್ಯದ ವ್ರತಗಳು ವೈರಾಗ್ಯದ ಸಂಕೇತಗಳೂ ಹೌದು. ರೋಗಗಳಿಗೆ ಔಷಧಿಗಳ ಜೊತೆಗೆ ಪಥ್ಯವನ್ನೂ ಹೇಳುವ ವೈದ್ಯನಂತೆ. ನಮ್ಮ ಪಾಲಿಗೆ ಭವರೋಗದ ವೈದ್ಯನಾದ ಶ್ರೀಹರಿಯ ಧನ್ವಂತರಿಯಾಗಿ ವರಾಹರೂಪದಿಂದ ತಿಳಿಹೇಳಿದ ಪಥ್ಯಗಳೇ ವ್ರತಾಚರಣೆಗಳು. ಪಥ್ಯಮಾಡದೆ ರೋಗ ವಾಸಿಯಾಗಲಾರದು.

ದಕ್ಷಿಣಾಯಣದ ದೇವತೆಗಳಿಗೆ ರಾತ್ರಿ ಸಮಯವಾದ ಕಾರಣ ಭಗವಂತನೂ ಯೋಗನಿದ್ರೆಯನ್ನೂ ಕೈಗೊಳ್ಳುತ್ತಾನೆ. ಅವನಿಗೆ ನಿದ್ರೆ ಇಲ್ಲ. ನಿದ್ರೆ ತಮೋಗುಣದ ಕಾರ್ಯ. ಅವನು ಗುಣಗಳಿಗೆ ಬದ್ಧನಲ್ಲ. ಭಕ್ತರ ನಾನಾವಿಧ ಉಪಾಸನೆಗೆ ಅನುಕೂಲ ಮಾಡಿ ಕೊಡಲು ಅವನು ಮಾಡುವ ಲೀಲೆಗಳು ಮಾತ್ರ. ಪ್ರತಿಬಿಂಬರಾದ ಜೀವರಲ್ಲಿ ಕ್ರಿಯೆ ಕಾಣಲು ಬಿಂಬನಾದ ತಾನು ಕ್ರಿಯೆ ಮಾಡುವ ಸರ್ವಕರ್ತನು. ಆದರೂ ನಿಷ್ಕ್ರಿಯನು. ಅಂತೆಯೇ ಪ್ರತಿಬಿಂಬ ರಾದ ನಾವು ಅವನ ಆರಾಧನೆಯಲ್ಲಿ ತೊಡಗುವುದು ಕರ್ತವ್ಯ ವಾಗಿದೆ. ಭಗವಂತನು ಯೋಗ ನಿದ್ರೆಯಲ್ಲಿರುವ ಕಾಲವೇ ಚಾತುರ್ಮಾಸ್ಯ.

ಸದಾಚಾರಿಗಳಾದ ಸನ್ಯಾಸಿಗಳಿಗೆ ಒಂದೆಡೆ ಸಂಕಲ್ಪಿಸಿ ಕೂಡುವ ಕಾಲವೂ ಚಾತುರ್ಮಾಸ್ಯ. ಅವರಿಗೆ ನಾನಾವಿಧ ಸೇವೆಯನ್ನು ಮಾಡಿ ಇತರರು ಉದ್ಧಾರವಾಗಲು ಒದಗಿಬರುವ ಪುಣ್ಯ ಸಮಯವಾಗಿದೆ. ಗೃಹಸ್ಥಾಶ್ರಮಿಗಳು ಕುಟುಂಬ ಪೋಷಣೆಯಲ್ಲಿ ಮುಳುಗಿರುವುದೇ ಹೆಚ್ಚು. ವಿಶೇಷವಾಗಿ ಸಾಧನ ಮಾಡಲು ಅವಕಾಶ ಕಡಿಮೆ. ಇಂತ ಗೃಹಸ್ಥಾಶ್ರಮಿಗಳು ಉದ್ಧಾರ ಹೇಗೆ? ಎಂಬ ಪ್ರಶ್ನೆಗೆ ಪರಮಹಂಸ ಸೇವೆಯೇ ಮುಖ್ಯವಾದ ಉಪಾಯ ಎನ್ನುತ್ತದೆ ಶ್ರೀ ಮದ್ಭಾಗವತ. ಇಂತಹ ಪರಮಹಂಸ ಸೇವೆಕಾಲವೇ ಚಾತುರ್ಮಾಸ್ಯ.

ದಕ್ಷಿಣಾಯನದ ಮೊದಲ ಮೂರು ಯಾಮ ಭಗವಂತನಿಗೆ ಪ್ರಿಯ. ಆ ಮೂರು ಯಾಮಗಳಲ್ಲೂ ಮೊದಲ ಎರಡು ಯಾಮಗಳು ಅತ್ಯಂತ ಪ್ರಿಯ. ಈ ಎರಡು ಯಾಮಗಳೇ ಚಾತುರ್ಮಾಸ್ಯ. ವರ್ಷದ ಹನ್ನೆರಡು ತಿಂಗಳಲ್ಲಿ ಉಳಿದ ಎಂಟು ಮಾಸಗಳಿಗಿಂತ ಈ ನಾಲ್ಕು ತಿಂಗಳಲ್ಲಿ ಆಚರಿಸಿದ ಜಪ, ತಪ, ದಾನವ್ರತದಿಂದ ಅನಂತ ಫಲವಿದೆ. ಈ ಚಾತುರ್ಮಾಸ್ಯದಲ್ಲೂ ಮುಂದೆ ಮುಂದೆ ಬರುವ ದಿನಗಳು ಹಿಂದಿನ ದಿನಗಳಿಗಿಂತಲೂ

ಶ್ರೇಷ್ಠ ಹಾಗೂ ಹೆಚ್ಚು ಪುಣ್ಯಕರ. ಈ ದಿನಗಳಲ್ಲಿ ಅನೇಕ ಹಬ್ಬ ಹರಿದಿನಗಳ ಸುರಿಮಳೆಯನ್ನೇ ಕಾಣುತ್ತೇವೆ. ಅವುಗಳಲ್ಲಿ ದೀಪಾವಳಿ ಮುಂತಾದ ದೊಡ್ಡ ಹಬ್ಬಗಳು ಸೇರತ್ತದೆ. ಅಂತಹ ಸಂದರ್ಭದಲ್ಲೂ ವ್ರತಾಚರಣೆ ಮಾಡುತ್ತ ಅನೇಕ ರುಚಿಕರ ವಸ್ತುಗಳನ್ನು ವರ್ಜಿಸಿ ದೇಹ ಶೋಷಣೆ ಮಾಡುತ್ತಾ ಜ್ಞಾನಜ್ಯೋತಿಗಳನ್ನು ಬೆಳಗುತ್ತಾ ಭಗವಂತನ ಆರಾಧನೆ ಮಾಡುವ ಕಾಲವೇ ಚಾತುರ್ಮಾಸ್ಯ.

ಪರಮಹಂಸ (ಸನ್ಯಾಸಿಗಳು) ಪೀಠಾಧಿಪತಿಗಳು ನಿರಂತರ ಸಂಚಾರದಲ್ಲಿರುವರು. ಅಂತೆಯೇ ಅವರಿಗೆ ಪರಿವ್ರಾಜಕಾಚಾರ್ಯ ರೆಂದು ಹೆಸರು. ಇದು ಶಾಸ್ತ್ರದ ಆದೇಶ. ಆದರೆ ಇದಕ್ಕೆ ಅಪವಾದ ಚಾತುರ್ಮಾಸ್ಯ ಕಾಲ. ನಿರಂತರ ಸಂಚಾರಕ್ಕೆ ಅನುಕೂಲವಾದ ಮಳೆಗಾಲದಲ್ಲಿ ಒಂದೇ ಕಡೆ ಇದ್ದು ಸಾಧನೆ ಗೈಯುವ ಕಾಲ. ವ್ರತನಿಮಿತ್ತವಾಗಿ ಹೆಚ್ಚು ಆಹಾರ ಸಂಯಮದ ಮೂಲ ಜಿಹ್ವೇಂದ್ರಿಯದ ನಿಯಂತ್ರಣ ಹಾಗೂ ಮನೋನಿಗ್ರಹಾ ದಿಗಳಿಗೆ ವಿಶೇಷ ಅನುಕೂಲತೆಯನ್ನು ಒದಗಿಸುವ ಕಾಲ.

ಚಾತುರ್ಮಾಸ್ಯ ವ್ರತದ ಆಚರಣೆಗೂ ಶುದ್ಧ ಪ್ರಾಚೀನ ಹಿನ್ನೆಲೆ ಉಂಟು. ಸಂಪ್ರದಾಯದ ಪುಷ್ಟಿ ಉಂಟು ಪರಂಪರೆ ಯುಂಟು. ಅಂಧ ಆಚರಣೆ ಅಥವಾ ಅರ್ವಾಚೀನರ ಸ್ವಾರ್ಥದ ಹಿನ್ನೆಲೆಯಲ್ಲಿ ಹೊಸದಾಗಿ ಸೃಷ್ಟಿಗೊಂಡ ಗೊಡ್ಡು ಆಚರಣೆ ಸರ್ವಥಾ ಅಲ್ಲ. ಪ್ರಾಮಾಣಿಕವಾದ ವೈಜ್ಞಾನಿಕ ಹಿನ್ನೆಲೆಯಿಂದ ಕೂಡಿದ ಪ್ರಾಚೀನ ಋಷಿಮುನಿಗಳು ಆಚರಿಸಿ ಫಲಗಳನ್ನು ಅನುಭವಿಸಿ ಸಂಪ್ರದಾಯ ಹಾಕಿಕೊಟ್ಟ ಆಚರಣೆಗಳಿವು. ಅಂತೆಯೇ ಎಲ್ಲ ಕಾಲಕ್ಕೂ ಅನುಕರಣಿಯವಾದವುಗಳು.

ಯಾವುದೇ ಆಚಾರ ವಿಚಾರಹೀನವಾಗಿರಬಾರದು. ಪ್ರತಿಯೊಂದು ಆಚರಣೆಯ ಹಿನೆಲೆಯಲ್ಲಿ ಸಾಕಷ್ಟು ವಿಚಾರಗಳು ತುಂಬಿರುತ್ತದೆ. ವ್ರತಾಚರಣೆಗಳನ್ನು ತಿಳಿಸುವ ಶಾಸ್ತ್ರ ಅವುಗಳನ್ನು ಹೇಗೆ ಆಚರಿಸಬೇಕು ಎಂಬ ಮಾಹಿತಿಯನ್ನು ನೀಡುತ್ತದೆ. ವ್ರತಗಳ ಆಚರಣೆಯಲ್ಲಿ ನಾವು ಅನುಸರಿಸಬೇಕಾದ ವಿಧಿನಿಷೇಧ ಗಳ ಬಗ್ಗೆ ಅರಿವು ಅವಶ್ಯವಾಗಿ ಇರಬೇಕು. ಈ ಅರಿವಿಲ್ಲದೆ ಆಚರಿಸುವ ವ್ರತಗಳು ನಿಷ್ಫಲಗಳಾಗುತ್ತದೆ. ಕಷ್ಟಪಟ್ಟು ದೇಹ ಶೋಷಣೆ ಮಾಡಿ ಆಚರಿಸಿದ ವ್ರತಗಳಿಂದ ಯೋಗ್ಯಫಲ ಪಡೆಯದೆ ಇರುವುದಕ್ಕಿಂತ ಸರಿಯಾಗಿ ತಿಳಿದು ಆಚರಿಸುವುದು ಬುದ್ದಿವಂತರ ಲಕ್ಷಣ. ಆ ವ್ರತಾಚರಣೆಗಳಿಗಿರುವ ವಿಧಿನಿಷೇಧ ಗಳಿಗೆ ಬದ್ಧರಾಗಿ ಶುದ್ಧರಾಗಿ ಭಗವತ್ಪ್ರಿಯಕರವಾಗಿ ಆಚರಿಸುವುದು ಬುದ್ಧಿವಂತಿಕೆ. ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಬದ್ಧರಾಗಿ ಆಚರಿಸುವುದು ಕಷ್ಟಸಾಧ್ಯವೆಂಬುದು ನಿಜ. ಆದರೆ ತನ್ನ ಭಕ್ತರು ಮಾಡುವ ದೊಡ್ಡದೊಡ್ಡ ದೋಷಗಳನ್ನೇ ಗಣನೆಗೆ ತೆಗೆದುಕೊಳ್ಳದಿರುವ ಕರುಣಾಸಾಗರ ನಾದ ಭಗವಂತ ಅತ್ಯಲ್ಪ ದೋಷಗಳನ್ನು ಎಣಿಸಲು ಸಾಧ್ಯವೇ? ಸರ್ವಥಾ ಇಲ್ಲ ಎಂಬ ಭರವಸೆ ಇಟ್ಟು ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಬೇಕು.

**ವ್ರತಾಚರಣೆ**

ವ್ರತ ಅನುಷ್ಠಾನಗಳಲ್ಲಿ ಆಷಾಢ ಶುಕ್ಲ ದ್ವಾದಶಿಯಿಂದ ಒಂದು ತಿಂಗಳ ಪರ್ಯಂತ ಶಾಕ ವ್ರತವನ್ನು, ಶ್ರಾವಣ ಶು. ದ್ವಾದಶಿ ಯಿಂದ ಒಂದು ತಿಂಗಳವರೆಗೆ ದಧಿವ್ರತವನ್ನು ಭಾದ್ರಪದ ಶುದ್ಧ ದ್ವಾದಶಿಯ ಲಾಗಾಯ್ತು ಮುಂದಿನ ತಿಂಗಳ ಕಾಲ ದ್ವಿದಳವ್ರತ ವನ್ನೂ ಆಚರಿಸಬೇಕು.

**ವ್ರತಾಚರಣೆ ಸಂದರ್ಭದಲ್ಲಿ ಉಲ್ಲೇಖಿತ ವಸ್ತುಗಳನ್ನು ಸೇವಿಸು ವಂತಿಲ್ಲ. ಉದಾ:** ದಧಿವ್ರತದ ಸಮಯದುದ್ದಕ್ಕೂ ಮೊಸರನ್ನು ಉಪಯೋಗಿಸುವುದಕ್ಕೆ ಆಸ್ಪದವಿಲ್ಲ. ಈ ನಾಲ್ಕು ವ್ರತಗಳಲ್ಲದೇ ದಿನತ್ರಯ ವ್ರತ, ಏಕಾದಶೀ ವ್ರತ, ಭೀಷ್ಮ ಪಂಚಕ ವ್ರತ, ವಿಷ್ಣುಪಂಚಕ ವ್ರತ, ಚಂದ್ರಾಯಣ, ಕೃಚ್ಛ್ರವ್ರತ ಇತ್ಯಾದಿ ವ್ರತ ಗಳನ್ನೂ ಕುರಿತಾದ ವಿಶೇಷ ಗುರೂಪದೇಶದ ಅನುಸಾರ ವಾಗಿಯೇ ನೇರವೇರಿಸಬೇಕೆಂದು ಶಾಸ್ತ್ರ ವಚನವಿರುವುದು.

ವ್ರತಾಚರಣೆಯಿಂದ ಲಭಿಸುವ ಶ್ರೇಯಸ್ಸು, ವ್ರತಸ್ಥನು ಶಾಸ್ತ್ರಗಳಿಂದ ನಿಷೇಧಿಸಲ್ಪಟ್ಟ ಕೃತ್ಯಗಳಲ್ಲಿ ತೊಡಗುವುದರಿಂದ ಉಂಟಾಗುವಂತಹ ಪುಣ್ಯಹ್ರಾಸವೇ ಮೊದಲಾದ ಹಾನಿಗಳನ್ನು ಅನುಭವಿಸಬೇಕಾಗುವುದು ಎಂದು ವರಾಹ ಪುರಾಣದ ವ್ಯಾಖ್ಯಾನ.

**ದಾನದಾಚರಣೆ:** ವ್ರತದಷ್ಟೇ ಪ್ರಾಮುಖ್ಯತೆಯನ್ನು ದಾನ ಗಳಿಗೂ ಸಹ ನೀಡಿರುವುದು ಇನ್ನೊಂದು ಅನುಸರಿಲೇಬೇಕಾದ ನಿಯಮಬದ್ಧವಾದ ಆಚರಣೆ. ಗೋದಾನ, ಹಿರಣ್ಯದಾನವೇ ಮೊದಲಾದವುಗಳನ್ನು ಸತ್ಪಾತ್ರರಿಗೆ ನೀಡಬೇಕೆಂದು ನಿರೂಪಿಸಿದೆ. ನಾಲ್ಕು ಮಾಸಗಳ ಪರ್ಯಂತ ಈ ರೀತಿ ವ್ರತಾಚರಣೆಯನ್ನು ನೆರವೇರಿಸಿ ಕಾರ್ತಿಕ ಶು. ದ್ವಾದಶಿಯಂದು ಚಾತುರ್ಮಾಸ್ಯವನ್ನು ಸಂಪನ್ನಗೊಳಿಸುವುದು ರೂಢಿ.

**ಚಾತುರ್ಮಾಸಸ್ಯ ಮಧ್ಯೇತು ವಪನಂ ವರ್ಜನಂ ವರ್ಜಯೇದ್ಯತಿಃ।**
**ಚತುರ್ಮಾಸಂ ದ್ವಿಮಾಸಂವಾಅಸದೈಶತ್ರ ಸಂವಸೇತ್ ॥**

ಎಂಬ ಉಕ್ತಿಯಂತೆ ನಾಲ್ಕು ಪಕ್ಷಗಳು ಅಥವಾ ಎರಡು ಮಾಸಗಳ ವ್ರತವನ್ನು ಆಚರಿಸಿ ಭಾದ್ರಪದ ಶುದ್ಧ ಪೂರ್ಣಿಮೆ ಯಂದು ಮೃತ್ತಿಕಾ ವಿಸರ್ಜನೇತ್ಯಾದಿ ಕೈಗೊಂಡು ಸಮಾಪನ ಗೊಳ್ಳುವುದೂ ಬಳಕೆಯಲ್ಲಿದೆ.

# ಆಪರೇಷನ್ ಸಿಂಧೂರ್

–ಮಂದಸ್ಮಿತೆ
ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದ ವಿದ್ಯಾರ್ಥಿನಿ.

ಭಾರತದಲ್ಲಿ ಭೂಸ್ವರ್ಗ ಎನಿಸಿದ್ದ ಕಾಶ್ಮೀರದಲ್ಲಿ ಏಪ್ರಿಲ್ 22ರಂದು ನಡೆದ ಘಟನೆ ಮಾನವೀಯತೆಗೆ ಮಾಡಿದ ದೊಡ್ಡ ಆಘಾತವೆನಿಸಿತ್ತು. ಕಾಶ್ಮೀರದ ಅತೀ ಸುಂದರ ತಾಣದಲ್ಲಿ ಕುಟುಂಬದೊಡನೆ ರಜಾ ದಿನಗಳ ಸಮಯ ಕಳೆಯಬೇಕು ಎಂದು ಹೋದವರು ಮರಳಿ ಬರಲಿಲ್ಲ. ಆದರೆ ಮರಳಿ ಬಾರದ ಲೋಕಕ್ಕೆ ಪಯಣಿಸಿದರು. ಪಹಲ್ಗಾಮ್‌ನಲ್ಲಿ ಆದ ಈ ಘಟನೆ ಭಾರತೀಯರ ರಕ್ತ ಕುದಿಸಿದ್ದಂತೂ ಸುಳ್ಳಲ್ಲ. ಪಾಕಿಸ್ತಾನದಲ್ಲಿ ಭಯೋತ್ಪಾದಕ ಸಿದ್ಧಾಂತಕ್ಕೆ ಪ್ರೇರಿತರಾದ ಉಗ್ರರು. ಪ್ರವಾಸಕ್ಕೆ ಬಂದ ಭಾರತೀಯರ ಧರ್ಮ ಕೇಳಿ, ಹಿಂದುಗಳು ಎಂದು ತಿಳಿದ ಮೇಲೆ ಅವಮಾನಿಸಿ, ವಿವಸ್ತ್ರಗೊಳಿಸಿ ತಲೆಗೆ ಗುಂಡಿಕ್ಕಿ ಕೊಂದರು. ಇದನ್ನೆಲ್ಲ ಅಲ್ಲಿಯೇ, ತನ್ನೆದುರಿಗೆ ನೋಡಿ, ಬಿಕ್ಕಿ ಬಿಕ್ಕಿ ಅಳುತ್ತಿದ್ದ ಹೆಣ್ಣುಮಗಳಿಗೆ, ಆ ಉಗ್ರ **"ಹೋಗಿ ಮೋದಿಗೆ ಹೇಳು"** ಎಂದು ನಕ್ಕಾಗ, ಭಾರತೀಯರ ಸ್ವಾಭಿಮಾನಕ್ಕೆ ಮಾಡಿದ ಅವಮಾನವಾಗಿತ್ತು. ಬಹುಶಃ ಹಾಗೆ ಹೇಳಿದ ಉಗ್ರನಿಗೆ ಮುಂದೇನಾಗಬಹುದು ಎಂಬ ಊಹೆಯೂ ಮಾಡಿರಲಿಲ್ಲವೇನೋ? ಮುಂದೆ ಆದದ್ದೂ ಪಹಲ್ಗಾಮ್ ದಾಳಿಯಲ್ಲಿ ಹೆಣ್ಣುಮಕ್ಕಳ ಸಿಂಧೂರವಳಿಸಿದ ಉಗ್ರನರ್ತನಕ್ಕೆ ಕೊಟ್ಟ ಪ್ರತ್ಯುತ್ತರ ಇತಿಹಾಸದಲ್ಲೇ ಮರೆಯಲಾಗದ, ನಿರೀಕ್ಷೆಗೂ ನಿಲುಕದ ದಾಳಿ ಪಾಕಿಸ್ತಾನಕ್ಕೆ ಜಾಗತಿಕ ಮಟ್ಟದಲ್ಲಿ ಹೊಡೆತಕ್ಕೆ ಈಡುಮಾಡಿದ **"ಆಪರೇಷನ್ ಸಿಂಧೂರ್."**

ಭಾರತ ಮೊದಲಿನಿಂದಲೂ ಮಾನವೀಯತೆಗೆ ಶ್ರೇಷ್ಠಸ್ಥಾನ ಕೊಟ್ಟಂತಹ ರಾಷ್ಟ್ರ. **"ವಸುದೈವ ಕುಟುಂಬಕಂ"** ಎಂದು ಸಾರಿ ಸಾರಿ ಹೇಳುವವರು ನಾವು. ಪಾಕಿಸ್ತಾನದ ಮತಾಂಧತೆ, ಭಯೋತ್ಪಾದಕ ಚಟುವಟಿಕೆಗಳಿಗೆ ಅನೇಕರನ್ನು ಕಳೆದುಕೊಂಡು, ಜಾಗತಿಕ ಮಟ್ಟದಲ್ಲಿ ಪಾಕ್‌ನ ಬಣ್ಣ ಬಯಲು ಮಾಡಿದರು, ಬುದ್ಧಿ ಬರದ ಪಾಕ್ ತನ್ನ ಹುಂಬುತನ ಬಿಡಲಿಲ್ಲ. ಪಹಲ್ಗಾಮ್ ದಾಳಿ ನಡೆದ ತಕ್ಷಣವೇ ಭಾರತ 1960ರ ಸಿಂಧೂ ಕಣಿವೆ ಒಪ್ಪಂದ ರದ್ದುಗೊಳಿಸಿತ್ತು. ಅತ್ತಾರಿ ಚೆಕ್‌ಪೋಸ್ಟ್‌ನ್ನು ಬಂದುಮಾಡಿ, ಸಾರ್ಕ್ ವೀಸಾವನ್ನು ಹಿಂಪಡೆಯಲಾಗಿತ್ತು. ಸಾರ್ಕ್ ವೀಸಾದ ಮೂಲಕ ಭಾರತದಲ್ಲಿರುವ ಪಾಕಿಸ್ತಾನಿಯರಿಗೆ ಮರಳಲು 48 ಗಂಟೆಗಳ ಕಾಲಾವಧಿ ನೀಡಿ ಪಾಕಿಸ್ತಾನಕ್ಕೆ ದಂಗುಬಡಿಸುವ ಉತ್ತರ ಕೊಟ್ಟಿದಂತೂ ಸುಳ್ಳಲ್ಲ. ಆದರೆ ಭಾರತದ ಜವಾಬು ಇಲ್ಲಿಗೆ ನಿಲ್ಲಲಿಲ್ಲ. ಭಾರತ ಈ ಬಾರಿ ಪಾಕಿಸ್ತಾನದ ದಾಳಿಗೆ ರಾಜತಾಂತ್ರಿಕವಾಗಿ ಜಾಗತಿಕ ಮಟ್ಟದಲ್ಲಿ ಹಿನ್ನಡೆ ಅನುಭವಿಸುವಂತೆ ಮಾಡಿದ್ದಲ್ಲದೆ ಪಾಕಿಸ್ತಾನದ ಊಹೆಗೂ ನಿಲುಕದ ಮಟ್ಟಿಗೆ ಆಪರೇಷನ್ ಸಿಂಧೂರ್ ಅನ್ನು ಅಣಿಗೊಳಿಸಿ ಭಾರತ ಭಯೋತ್ಪಾಕದ ಸಿದ್ಧಾಂತವನ್ನು ತೀಕ್ಷಣವಾಗಿ ಖಂಡಿಸುತ್ತದೆ ಎಂದು ಸಾರಿ ಹೇಳಿತು. ಮೇ 7, 2025 ಭಾರತೀಯರಿಗೆ ಮರೆಲಾಗದ ದಿನ. ನಮ್ಮ ಹೆಣ್ಣುಮಕ್ಕಳ ಸಿಂಧೂರ ಅಳಿಸಿದ ಪಾಕಿಸ್ತಾನದ ದಾಳಿಕೋರರಿಗೆ, ನಮ್ಮ ಹೆಣ್ಣುಮಕ್ಕಳ ಗೌರವಕ್ಕೆ ಧಕ್ಕೆ ತಂದರೆ ನಿಮ್ಮ ನೆತ್ತರನ್ನು ಹರಿಸದೆ ಬಿಡೆವು ಎಂಬ ದಿಟ್ಟ ಉತ್ತರ ಕೊಟ್ಟಂತಿತ್ತು.

ಭಾರತ–ಪಾಕ್ ನಡುವಿನ ಗಡಿರೇಖೆ ಹಾಗೂ ಗಡಿನಿಯಂತ್ರಣ ರೇಖೆಗೆ ಸಮೀಪದಲ್ಲಿ ಉಗ್ರರ ತರಬೇತಿ ಕೇಂದ್ರಗಳಿವೆ. ಈ 21 ಕೇಂದ್ರಗಳಲ್ಲಿ 9 ಕೇಂದ್ರಗಳ ಮೇಲೆ ಭಾರತೀಯ ಸೇನೆ ಕಾರ್ಯಾಚರಣೆ, ಮೇ 7ರ ಮಧ್ಯರಾತ್ರಿ ಜರುಗಿಸಿತು. ಬೆಳಗಾಗುವುದರ ಒಳಗಾಗಿ ಉಗ್ರರ ನೆಲೆ ಧ್ವಂಸವಾಗಿತ್ತು. ಭಾರತ ಅತ್ಯುನ್ನತ ಶ್ರೇಣಿಯ ಕ್ಷಿಪಣಿಗಳನ್ನು ಬಳಸಿ, ತನ್ನ ಸೇನಾ ಪರಾಕ್ರಮವನ್ನು ಜಗತ್ತಿಗೆ ತೋರಿಸಿತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ಎರಡೇ ದಿನಗಳ ಬಳಿಕ ದಾಳಿ ನಡೆಸಿತು. ಅವಂತಿಪುರ್, ಶ್ರೀನಗರ, ಜಮ್ಮು, ಪಠಾಣ್‌ಕೋಟ್, ಅಮೃತಸರ, ಕಪುರ್ತಲ, ಜಲಂಧರ್, ಲೂಧಿಯಾನ, ಚಂಡೀಗಡ್, ಭಟಿಂಡಾ, ನಾಲ್, ಫಾಲೋಡಿ, ಭುಜ್ ಮೇಲೆ ಕ್ಷಿಪಣಿಗಳು ಹಾಗೂ ಡ್ರೋನ್‌ಗಳ ಸುರಿಮಳೆಗೈದಿತ್ತು. ಆಗ ಬಂದ ಕ್ಷಿಪಣಿಗಳಿಗೆ ಅಲ್ಲೇ ನಾಶಗೊಳಿಸುವಂತೆ ಮಾಡಿದ್ದು ಸುದರ್ಶನಚಕ್ರ. ಭಾರತದ ವಾಯುಸೇನೆಯ ರಕ್ಷಣಾ ವ್ಯವಸ್ಥೆಯ ಪ್ರತೀಕವಾಯಿತು ಸುದರ್ಶನಚಕ್ರ.( ಎಸ್.400).

ಈ ಬಾರಿ ಆಪರೇಷನ್ ಸಿಂಧೂರ್ ದಾಳಿ ಭಾರತದ ತೇಜಸ್ಸನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸಿದ್ದಂತೂ ಸುಳ್ಳಲ್ಲ. ಸೇವಾ ಪರಾಕ್ರಮವಲ್ಲದೆ ರಾಜತಾಂತ್ರಿಕವಾಗಿಯೂ ಬಹಳಷ್ಟು ಮುನ್ನಡೆ ಸಾಧಿಸಿದ್ದು, ಇಡೀ ಪ್ರಪಂಚಕ್ಕೆ ಸಾರಿ ಹೇಳಿದೆ.

ಆಪರೇಷನ್ ಸಿಂಧೂರ್‌ನ ಮುಂದಾಳತ್ವ ವಹಿಸಿದ್ದು ನಮ್ಮ ದೇಶದ ವೀರ ವನಿತೆಯರು. ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ ಮತ್ತು ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ವ್ಯೂಮಿಕಾ ಸಿಂಗ್, ಸೋಫಿಯಾ ಖುರೇಷಿ ಸೇನಾ ಕುಟುಂಬದ ಹಿನ್ನಲೆಯವರಾಗಿದ್ದರೆ, ವ್ಯೂಮಿಕಾ ಸಿಂಗ್ ವಾಯುಸೇನೆಗೆ ನೀಡಿದ ಕೊಡುಗೆಗಳು ಬಹಳಷ್ಟಿವೆ. ಇವರಿಬ್ಬರೂ ಕೂಡ ಭಾರತೀಯ ಸೇನಾ ಪಡೆಯಲ್ಲಿ ಉನ್ನತ ಶ್ರೇಣಿ ಹಾಗೂ ನಾಯಕತ್ವಕ್ಕೆ ಸಿಂಧುತ್ವದ ಪ್ರತೀಕರಾದರು ಎಂಬುದರಲ್ಲಿ ಅತಿಶಯೋಕ್ತಿಯಲ್ಲ.

ಆಪರೇಷನ್ ಸಿಂಧೂರ್ ಆದ ಬಳಿಕ ಯಾವುದೇ ರಾಷ್ಟ್ರವಾಗಲೀ ಭಾರತದ ನಡೆಗೆ ಟೀಕೆ ವ್ಯಕ್ತವಾಗಲಿಲ್ಲ. ವಿಪರ್ಯಾಸವೆಂದರೆ ಈ ದಾಳಿಯಾದ ಬಳಿಕ ಪಾಕಿಸ್ತಾನ ತನ್ನ ದೇಶದಲ್ಲಿ ಮಾಡಿದ ದಾಳಿಯಿಂದಾಗಿ ಮುಗ್ಧರ ಸಾವು ಸಂಭವಿಸಿದೆ. ಪಾಕಿಸ್ತಾನದ ರಕ್ಷಣಾ ಮಂತ್ರಿ ಖಾಸಗಿ ವಾಹಿನಿಯೊಂದರ ಸಂದರ್ಶನದಲ್ಲಿ ಪಾಕಿಸ್ತಾನ ಭಾರತದ 5 ವಾಯುಸೇನೆಯ ಜೆಟ್‌ಗಳನ್ನು ಉಡಾಯಿಸಿದೆ ಎಂಬ ಹೇಳಿಕೆಗೆ ಭಾರತ ಇದಕ್ಕೆ ಸೂಕ್ತವಾದ ಸಾಕ್ಷ್ಯಾಧಾರಗಳಿಲ್ಲ ಎನ್ನುತ್ತಿದೆ. ಇದರ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು? ಎಂಬ ಪ್ರಶ್ನೆಗೆ "ಇದರ ಸಾಕ್ಷಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅದೂ ಭಾರತದ ಸಾಮಾಜಿಕ ಜಾಲತಾಣ ದಲ್ಲಿ ನಮ್ಮ ದೇಶದ್ದಲ್ಲ." ಈ ಹೇಳಿಕೆಯನ್ನು ಆ ರಾಷ್ಟ್ರದ ರಕ್ಷಣಾ ಮಂತ್ರಿ ನೀಡಿದ್ದು ನಿಜಕ್ಕೂ ಆ ದೇಶದ ಆಡಳಿತ ಎಂತಹ ಧರ್ಮಾಂಧ ಮೂರ್ಖರ ಕೈಯಲ್ಲಿದೆ ಎಂಬ ಕಳಕಳಿಗೆ ಈಡುಮಾಡುವುದಂತೂ ಸುಳ್ಳಲ್ಲ.

ಪಾಕಿಸ್ತಾನದ ನಡೆ ಅದಕ್ಕೆ ಮುಜಗರವಾಗುವಂತೆ ಮಾಡಿದರೆ, ಭಾರತದ ಜಾಣ್ಮೆ, ಶಕ್ತಿ ಹಾಗೂ ಶಾಂತಿ–ಸೌಹಾರ್ದತೆಯ ಭಾವ ಜಗತ್ತಿಗೆ ಮತ್ತೆ ನೆನಪಿಸುವ ಸಾಕ್ಷಿಯಾಗಿ ಹೊಮ್ಮಿತು, **"ಆಪರೇಷನ್ ಸಿಂಧೂರ್"**.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಾಲಯಕ್ಕೆ ಭಾಜಪ ರಾಜ್ಯಾಧ್ಯಕ್ಷ ಶ್ರೀ ಬಿ.ವೈ.ವಿಜಯೇಂದ್ರ ಭೇಟಿ, ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಕೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಗಾಯತ್ರಿ ಭವನಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರರವರು ಭೇಟಿ ನೀಡಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಎಸ್. ರಘುನಾಥ್ ರವರು, ಶಾಸಕರಾದ ಸಿ.ಕೆ. ರಾಮಮೂರ್ತಿ, ಹಿರಿಯ ಉಪಾಧ್ಯಕ್ಷರಾದ ಆರ್. ಲಕ್ಷ್ಮೀಕಾಂತ್, ಖಜಾಂಚಿ ಸುಬ್ಬನರಸಿಂಹ, ಮಾಜಿ ಅಧ್ಯಕ್ಷರಾದ ಎಂ.ಆರ್.ವಿ. ಪ್ರಸಾದ್, ಬಿಜೆಪಿ ಮುಖಂಡ ದತ್ತಾತ್ರಿರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬಿ.ವೈ. ವಿಜಯೇಂದ್ರರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಬಿ.ವೈ.ವಿಜಯೇಂದ್ರ ರವರು ಮಾತನಾಡಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಲ್ಲಿ ಅನೇಕ ಹಿರಿಯರು ಪ್ರಾಮಾಣಿಕ ಸೇವೆಯಿಂದ ಸಮಾಜಕ್ಕೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ವಿಪ್ರರ ಅಭಿವೃದ್ಧಿಗೆ 100ಕೋಟಿ ದತ್ತಿನಿಧಿ ಸಂಗ್ರಹಕ್ಕೆ ಗುರಿ ತಲುಪುವ ವಿಶ್ವಾಸವಿದೆ ಎಂದು ತಿಳಿಸಿದರು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಾಲಯದಲ್ಲಿ ಪರಮಪೂಜ್ಯರಾದ ಜಗದ್ಗುರು ಶ್ರೀ ಶಂಕರಾಚಾರ್ಯರ ಮತ್ತು ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಣೆ



ಪರಮಪೂಜ್ಯ ಜಗದ್ಗುರು ಶ್ರೀ ಶಂಕರಾಚಾರ್ಯರ ಮತ್ತು ಶ್ರೀ ರಾಮಾನುಜಾಚಾರ್ಯರ ಜಯಂತಿಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಾಲಯದಲ್ಲಿ ಅತಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಡಾ. ಕೆ. ರಾಮಚಂದ್ರ ಮತ್ತು ಅಶ್ವತ್ಥನಾರಾಯಣರವರು ಮತ್ತು ಎ.ಟಿ. ರಮೇಶ್ ರವರ ನೇತೃತ್ವದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಮಹಾಸಭೆಯ ಹಿತೈಷಿಗಳೂ, ಸದಸ್ಯರೂ ಮತ್ತು ಮಹಾಸಭೆಯ ಸಿಬ್ಬಂದಿ ವರ್ಗದವರೂ ಪಾಲ್ಗೊಂಡಿದ್ದರು.



ದಿನಾಂಕ 28–04–2025ರ ಸೋಮವಾರ ಮಧ್ಯಾಹ್ನ 3–00 ಗಂಟೆಯಿಂದ ದಿನಾಂಕ 29–04–2025ರ ಮಂಗಳವಾರ ಮಧ್ಯಾಹ್ನ 2–00ವರೆಗೆ ಶೃಂಗೇರಿಯಲ್ಲಿ ಜರುಗಿದ ಶ್ರೀ ಶಂಕರ ಜಯಂತಿ ಆಚರಣೆಯಲ್ಲಿ ಭಕ್ತಿಯಿಂದ ಭಾಗವಹಿಸಿ ಸ್ತೋತ್ರ, ಭಜನೆಗಳನ್ನು ನಡೆಸಿದ ದಾವಣಗೆರೆ ಜಿಲ್ಲೆಯ 50 ಜನ ಭಜಕರು.

## ಮಹಾಸಭೆಯ ಕಾರ್ಪಸ್ ನಿಧಿಗೆ ದೇಣಿಗೆ ನೀಡಿದ ವಿಪ್ರ ಮಹನೀಯರುಗಳು

| | |
|---|---|
| 1. ಮಾನ್ಯ ಅಧ್ಯಕ್ಷರಾದ ಶ್ರೀ ರಘುನಾಥ್. ಎಸ್. | .. 10.00 ಲಕ್ಷ |
| 2. ಶ್ರೀ ಶಂಕರ್ ಎ. ಹಿರಿಯ ವಕೀಲರು | .. 10.00 ಲಕ್ಷ |
| 3. ಭಾಗ್ ಮನೆ, ಡೆವಲಪರ್ಸ್, ಬೆಂಗಳೂರು | .. 10.00 ಲಕ್ಷ |
| 4. ಶ್ರೀ ದಯಾನಂದ ಪೈ, ಮಾಜಿ ಖಜಾಂಚಿಗಳು | .. 5.00 ಲಕ್ಷ |
| 5. ಶ್ರೀ ಆರ್. ಲಕ್ಷ್ಮೀಕಾಂತ್ | .. 1.00 ಲಕ್ಷ |
| 6. ಶ್ರೀ ಪ್ರಹ್ಲಾದ್ ಬಿ.ಎನ್. | .. 1.00 ಲಕ್ಷ |
| 7. ಮೆ॥ ಫಾರ್ಚ್ಯೂನ್ ಇನ್ಫರ್ಮೇಷನ್ ಸಲ್ಯೂಷನ್ | .. 1.00 ಲಕ್ಷ |
| 8. ಶ್ರೀ ವಿ.ಎ. ಮೂರ್ತಿ | .. 1.00 ಲಕ್ಷ |
| 9. ಶ್ರೀ ಮಂಜುನಾಥ ಕೆ. ಹೊಸಕೋಟೆ | .. 1.00 ಲಕ್ಷ |
| 10.ಶ್ರೀ ಮೃತ್ಯುಂಜಯ ಕೆ.ಎಸ್. ನೆಲಮಂಗಲ | .. 1.00 ಲಕ್ಷ |
| 11. ಮೆ॥ ಪುಲಿಗಲ್ ಪ್ರೊಜೆಕ್ಟ್ ಪ್ರೈ.ಲಿ. | .. 1.00 ಲಕ್ಷ |
| 12.ಶ್ರೀಮತಿ ಪದ್ಮಾಶೇಷಾದ್ರಿ | .. 1,01 ಲಕ್ಷ |
| 13.ಶ್ರೀ ರಘುನಾಥ್ ನಾರಾಯಣ್ | .. 1.01 ಲಕ್ಷ |
| 14.ಶ್ರೀ ಗಿರೀಶ್ ಮಸೂರಕರ್, ಬಾಗಲಕೋಟೆ | .. 1.00 ಲಕ್ಷ |
| 15.ಶ್ರೀ ಸತೀಶ್ ಕುಮಾರ್, ಬೆಂಗಳೂರು | .. 1.00 ಲಕ್ಷ |
| 16.ಶ್ರೀ ವೆಂಕಟೇಶ್ ಟಿ.ಎನ್. | .. 1.00 ಲಕ್ಷ |
| 17.ಶ್ರೀಮತಿ ವೀಣಾ ದಿಲೀಪ್‌ಕುಮಾರ್, ಗವಿಪುರಂ | .. 1.00 ಲಕ್ಷ |
| 18.ಶ್ರೀ ಕೃಷ್ಣಮೂರ್ತಿ, ಡಿ.ವಿ. ದೇವಸಂದ್ರ | .. 1.00 ಲಕ್ಷ |
| 19.ಶ್ರೀ ಮಂಜುನಾಥ ಕೆ.ಎನ್., ಕತ್ರಿಗುಪ್ಪೆ | .. 1.00 ಲಕ್ಷ |
| 20.ಶ್ರೀವೆಂಕಟೇಶ್ ಟಿ.ಸಿ., ಶಂಕರಪುರಂ (ತಾಯಿಯವರಾದ ಲೇಟ್ ಶ್ರೀಮತಿ ಎನ್. ಮನೋರಮ ಹೆಸರಿನಲ್ಲಿ) | .. 1.00 ಲಕ್ಷ |
| 21.ಡಾ॥ ಸಂಜಯ್ ನಾಯಕ್, ರಾಣೆಬೆನ್ನೂರು | .. 1.00 ಲಕ್ಷ |
| 22.ಶ್ರೀ ಶಿವಶಂಕರ್ ಎಂ.ಆರ್. ಸುಬ್ರಹ್ಮಣ್ಯಪುರ | .. 1.00 ಲಕ್ಷ |
| 23.ಶ್ರೀ ಭಾನುಪ್ರಿಯ ಎಂ.ವಿ. | .. 0.25 ಲಕ್ಷ |
| 24.ಶ್ರೀ ಛಾಯಾಪತಿ ಕೆ.ಎನ್. | .. 0.25 ಲಕ್ಷ |

**ಕಾರ್ಪಸ್ ನಿಧಿಗೆ ದೇಣಿಗೆ ನೀಡಿದ ವಿಪ್ರ ಮಹನೀಯರುಗಳಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಭಿನಂದನೆಗಳು.**



ಕೋನಕುಂಟ್ಲು ಸುಕ್ಷೇತ್ರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಿಗೆ ಹಾಗೂ ಹಿರಿಯ ಉಪಾಧ್ಯಕ್ಷರಿಗೆ ಸನ್ಮಾನ ಕಾರ್ಯಕ್ರಮ.

# ಪರಮಪೂಜ್ಯ ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆ
# ಶಂಕರಾಚಾರ್ಯರಿಂದ ಹಿಂದೂ ಧರ್ಮ ಪುರುಜ್ಜೀವನ : ಸಚಿವರ ಹೇಳಿಕೆ






**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಶ್ರೀ ಆದಿ ಶಂಕರಾಚಾರ್ಯರ ಜಯಂತಿ ಆಚರಣೆ**

ಆದಿ ಶಂಕರಾಚಾರ್ಯರು ಸಾಂಸ್ಕೃತಿಕ ಮತ್ತು ಧಾರ್ಮಿಕ ಅವನತಿ ಸಮಯದಲ್ಲಿ ಹಿಂದೂ ಧರ್ಮವನ್ನು ಪುರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಶ್ರೀ ಆದಿ ಶಂಕರಾಚಾರ್ಯರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಶಂಕರಾಚಾರ್ಯರು, ಬಸವಣ್ಣ, ಕನಕದಾಸರು ಸೇರಿದಂತೆ ಹಲವು ಮಹನೀಯರು ಯಾವುದೇ ಒಂದು ಧರ್ಮ ಮತ್ತು ಜಾತಿಗೆ ಸಿಮೀತರಾದವರಲ್ಲ. ಈ ಮೇಲಿನ ಮಹನೀಯರೆಲ್ಲರೂ ಚಿಕ್ಕವಯಸ್ಸಿನಲ್ಲೇ ಅಪಾರ ಸಾಧನೆ ಮಾಡಿದವರು. ಅವರೆಲ್ಲರ ಆಚಾರ, ವಿಚಾರ ಮತ್ತು ಚಿಂತನೆಗಳು ಎಂದೆಂದಿಗೂ ಪ್ರಸ್ತುತ ಎಂದರು. ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡುರಾವ್, ರಾಜ್ಯ ಬ್ರಾಹ್ಮಣ ಅಭಿವೃದ್ದಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಎಸ್. ರಘುನಾಥ್ ರವರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು, ಭಕ್ತಾದಿಗಳು ಸೇರಿದ್ದರು.

**ಮುಂದಿನ ವರ್ಷದಿಂದ ಆದಿ ಶಂಕರಾಚಾರ್ಯರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುವುದು. ಪ್ರಶಸ್ತಿ ಆಯ್ಕೆಗಾಗಿ ಸಮಿತಿಯನ್ನು ರಚಿಸಲಾಗುವುದು. ಅರ್ಹರನ್ನು ಪ್ರಶಸ್ತಿಗೆ ಪಾರದರ್ಶಕವಾಗಿ ಆಯ್ಕೆ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಘೋಷಿಸಿದರು.**

## ದಾವಣಗೆರೆಯಲ್ಲಿ ನಡೆದ ಭಗವದ್ಗೀತೆ ಸ್ಪರ್ಧೆ





**ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ ಅಂಗವಾಗಿ ಬಬ್ಬೂರುಕಮ್ಮೆ ಸೇವಾ ಸಮಿತಿ ಬೆಂಗಳೂರು ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಿಗೆ ಶ್ರೀ ಶಂಕರ ಪ್ರಶಸ್ತಿಯನ್ನು ಹೈಕೋರ್ಟ್ ವಿಶ್ರಾಂತ ನ್ಯಾ. ಎನ್. ಕುಮಾರ್ ಪ್ರದಾನ ಮಾಡಿದರು.**

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು.

## ರಾಜ್ಯ ಉಪಾಧ್ಯಕ್ಷರು :

| ಕ್ರಮ ಸಂಖ್ಯೆ | ಹೆಸರು | ಜಿಲ್ಲೆ |
|---|---|---|
| 1. | ಶ್ರೀ ಸುದರ್ಶನಮ್. ಎಸ್ | ಬೆಂಗಳೂರು |
| 2. | ಶ್ರೀ ರಾಮಪ್ರಸಾದ್. ಕೆ | ಬೆಂಗಳೂರು |
| 3. | ಶ್ರೀ ನರಸಿಂಹನ್. ಎಮ್ | ಬೆಂಗಳೂರು |
| 4. | ಡಾ॥. ಸತ್ಯಪ್ರಕಾಶ್. ಎನ್ | ಬೆಂಗಳೂರು |
| 5. | ಶ್ರೀ ಚಿದಾನಂದ. ಎನ್.ಎಲ್ | ಬೆಂಗಳೂರು |
| 6. | ಶ್ರೀ ಲಕ್ಷ್ಮೀನಾರಾಯಣರಾವ್. ಜಿ.ಎನ್ | ಬೆಂಗಳೂರು |
| 7. | ಶ್ರೀ ಜನಾರ್ದನರಾವ್ | ಬೆಂಗಳೂರು |
| 8. | ಶ್ರೀ ವಿಜಯಕುಮಾರ್ (ಹಿಮಾಂಶು) | ಬೆಂಗಳೂರು |
| 9. | ಶ್ರೀ ನಾಗಭೂಷಣರಾವ್. ಕೆ | ಚಿಕ್ಕಬಳ್ಳಾಪುರ |
| 10. | ಶ್ರೀ ದತ್ತಾತ್ರೀ. ಎಸ್ | ಶಿವಮೊಗ್ಗ |
| 11. | ಶ್ರೀ ಪ್ರಸನ್ನಕುಮಾರ್ | ಶಿವಮೊಗ್ಗ |
| 12 | ಶ್ರೀ ಜಗನ್ನಾಥ್ ಕುಲಕರ್ಣಿ | ರಾಯಚೂರು |
| 13 | ಶ್ರೀ ಪ್ರಹ್ಲಾದ ಬಾಬು. ಬಿ.ಎನ್ | ಬೆಂಗಳೂರು |
| 14 | ಪ್ರೊ॥ ರವಿಶಂಕರ್. ಬಿ.ವಿ | ಬೆಂಗಳೂರು |
| 15 | ಶ್ರೀ ಸುಧೀಂದ್ರ ಕುಮಾರ್ ಹೆಚ್.ಎಸ್ | ಬೆಂಗಳೂರು |
| 16 | ಶ್ರೀ ಚಂದ್ರಶೇಖರ್. ಹೆಚ್.ಎನ್ | ತುಮಕೂರು |
| 17 | ಶ್ರೀ ವೇಣುಗೋಪಾಲ್. | ಬೆಂಗಳೂರು |
| 18 | ಶ್ರೀ ಪುರುಷೋತ್ತಮ್ | ಕೋಲಾರ |
| 19 | ಶ್ರೀ ಚಂದ್ರಶೇಖರ್ ಹೆಬ್ಬಾರ್ | ಬೆಂಗಳೂರು |
| 20 | ಶ್ರೀ ಶಿವಶಂಕರ್. ಎಮ್.ಆರ್ | ಬೆಂಗಳೂರು |
| 21 | ಶ್ರೀ ಅನೀಲ್ ಕುಮಾರ್. ಜೆ.ಹೆಚ್ | ಬೆಂಗಳೂರು |
| 22 | ಶ್ರೀ ರವಿಶಂಕರ್. ಎಸ್.ಎನ್ | ಬೆಂಗಳೂರು |
| 23 | ಶ್ರೀ ಮೋಹನ್. ಕೆ | ಬೆಂಗಳೂರು |
| 24 | ಶ್ರೀ ನಾಗರಾಜ್. ಜಿ.ವಿ | ಮಂಡ್ಯ |
| 25 | ಶ್ರೀ ರವಿಶಂಕರ್. ಬಿ.ಎಸ್ | ಬೆಂಗಳೂರು |
| 26 | ಶ್ರೀ ನಾಗರಾಜ್ (ಕೋನಕುಂಟ್ಲು) | ಚಿಕ್ಕಬಳ್ಳಾಪುರ |
| 27 | ಡಾ॥ ಶಂಕರ್ ಗುಹಾ | ಬೆಂಗಳೂರು |
| 28 | ಶ್ರೀ ದೇಸು ನಾಗರಾಜ್ | ಬೆಂಗಳೂರು ಗ್ರಾಮಾಂತರ |
| 29 | ಶ್ರೀ ಭಾಸ್ಕರರಾವ್ | ಬೆಂಗಳೂರು |
| 30 | ಶ್ರೀ ಕುಲಕರ್ಣಿ ಜಿ.ಕೆ. | ವಿಜಯಪುರ |
| 31 | ಡಾ॥ ನಾಗೇಂದ್ರ. ಜಿ | ಬೆಂಗಳೂರು |
| 32 | ಶ್ರೀ ಸತ್ಯನಾರಾಯಣ. ಹೆಚ್.ವಿ | ಬೆಂಗಳೂರು |
| 33 | ಶ್ರೀ ಶ್ರೀನಿವಾಸಮೂರ್ತಿ. ಜೆ | ಬಳ್ಳಾರಿ |
| 34 | ಶ್ರೀ ಶಿವರಾಂ ತಾಡಿ | ಬೆಂಗಳೂರು |
| 35 | ಶ್ರೀ ನಂ. ಶ್ರೀಕಂಠಕುಮಾರ್ | ಮೈಸೂರು |
| 36 | ಶ್ರೀ ನವೀನ್‌ಕುಮಾರ್. ಎನ್ | ಮೈಸೂರು |
| 37 | ಶ್ರೀ ಕುಮಾರ್. ಬಿ.ವಿ | ಬೆಂಗಳೂರು |
| 38 | ಶ್ರೀ ಧೇ. ತಿ ಕೃಷ್ಣಮೂರ್ತಿ | ಬೆಂಗಳೂರು |
| 39 | ಶ್ರೀ ರಥಯಾತ್ರೆ ಸುರೇಶ್ | ಬೆಂಗಳೂರು |
| 40 | ಡಾ॥ ಕೃ.ವೆ. ರಾಮಚಂದ್ರ | ಬೆಂಗಳೂರು |
| 41 | ಶ್ರೀಮತಿ ಲತಾ ಕುಮಾರ್ | ಬೆಂಗಳೂರು |
| 42 | ಶ್ರೀಮತಿ ಮಾಲಿನಿ. ಎನ್ | ಬೆಂಗಳೂರು |
| 43 | ಶ್ರೀಮತಿ ರೂಪಾ ಶಾಸ್ತ್ರಿ | ಬೆಂಗಳೂರು |
| 44 | ಶ್ರೀ ಸಂದೀಪ್ ಕುಮಾರ್ ಮಂಜಾ | ಉಡುಪಿ |
| 45 | ಶ್ರೀ ಸತ್ಯಪ್ರಮೋದ್ | ಹಾಸನ |
| 46 | ಡಾ॥. ರಾಘವೇಂದ್ರರಾವ್. ವಿ (ಈಜೀಪುರ) | ಬೆಂಗಳೂರು |
| 47 | ಶ್ರೀ ದ್ವಾರಕನಾಥ್ (ದೊಡ್ಡಬಳ್ಳಾಪುರ) | ಬೆಂಗಳೂರು ಗ್ರಾಮಾಂತರ |
| 48 | ಶ್ರೀ ಚಂದ್ರಶೇಖರ್ ಆರ್. | ಜಿರಾಮನಗರ |
| 49 | ಶ್ರೀ ಮಂಜುನಾಥ್ ಪಿ.ಎಸ್. | ಚಿತ್ರದುರ್ಗ |
| 50 | ಶ್ರೀ ನಾಗಭೂಷಣರಾವ್ | ದಾವಣಗೆರೆ |
| 51 | ಶ್ರೀ ರಘುನಾಥ್ ಸೋಮಯಾಜಿ | ದಕ್ಷಿಣ ಕನ್ನಡ |
| 52 | ಶ್ರೀ ಪ್ರಾಣೇಶ್ ಮದೀನೂರು | ಕೊಪ್ಪಳ |
| 53 | ಶ್ರೀ ವೆಂಕಟೇಶ್ ಕುಲಕರ್ಣಿ | ಗದಗ |
| 54 | ಶ್ರೀ ಶ್ರೀಧರ್ (ಕಳಸಾಪುರ) | ಚಿಕ್ಕಮಗಳೂರು |
| 55 | ಶ್ರೀ ವಿದ್ಯಾಸಾಗರ ಕುಲಕರ್ಣಿ | ಗುಲಬರ್ಗ |
| 56 | ಡಾ॥. ಸಂಜಯ್ ನಾಯ್ಕ್ | ಹಾವೇರಿ |
| 57 | ಡಾ॥. ಕೆ.ಜಿ. ಕುಲಕರ್ಣಿ | ಕೊಪ್ಪಳ |
| 58 | ಶ್ರೀ ಅವಧೂತ ಜೋಷಿ | ವಿಜಯಪುರ |

| ಕ್ರಮ ಸಂಖ್ಯೆ | ಹೆಸರು | ಜಿಲ್ಲೆ |
|---|---|---|
| 59 | ಶ್ರೀ ವೆಂಕೋಬರಾವ್ ಟಿ. | ವಿಜಯನಗರ |
| 60 | ಶ್ರೀ ಸುರೇಶ್ ಋಗ್ವೇದಿ | ಚಾಮರಾಜನಗರ |
| 61 | ಶ್ರೀ ಭಾಸ್ಕರಮೂರ್ತಿ | ಬೆಂಗಳೂರು |
| 62 | ಡಾ. ಗಿರಿಧರ ಕಜೆ | ಉತ್ತರ ಕನ್ನಡ/ಬೆಂಗಳೂರು |
| 63 | ಶ್ರೀ ಗಣಪತಿ ಜೋಷಿ. ಎಂ | ಉಡುಪಿ/ಬೆಂಗಳೂರು |
| 64 | ಶ್ರೀ ವಿಶ್ವನಾಥಯ್ಯ | ಮೈಸೂರು |
| 65 | ಶ್ರೀ ಜಗನ್ನಾಥ್. ಎಸ್ | ಬೆಂಗಳೂರು ಉತ್ತರ |
| 66 | ಶ್ರೀ ರಾಜೀವ್ ಹೆಚ್.ವಿ. | ಮೈಸೂರು |
| 67 | ಶ್ರೀ ಕೃಷ್ಣಮೂರ್ತಿ ಎಸ್.ಆರ್. | ಬೆಂಗಳೂರು ದಕ್ಷಿಣ |
| 68 | ಶ್ರೀ ಕುಲಕರ್ಣಿ ಎನ್.ಆರ್. | ಧಾರವಾಡ |
| 69 | ಶ್ರೀಮತಿ ಅಂಬಿಕಾ ರಾಮಚಂದ್ರ | ಬೆಂಗಳೂರು ದಕ್ಷಿಣ |
| 70 | ಶ್ರೀ ಅಚ್ಯುತಮೂರ್ತಿ (ಅನೇಕಲ್) | ಬೆಂಗಳೂರು ದಕ್ಷಿಣ |
| 71 | ಶ್ರೀ ಲಕ್ಷ್ಮೀಶ ಎಸ್.ಎಸ್. (ಹೊಸಕೋಟೆ) | ಬೆಂಗಳೂರು ಗ್ರಾ |
| 72 | ಶ್ರೀ ವೆಂಕಟೇಶ್ ಕುಲಕರ್ಣಿ | ಬೀದರ್ |
| 73. | ಶ್ರೀ ಲಕ್ಷ್ಮಣ ಚಿದಂಬರ ಕುಲಕರ್ಣಿ | ಹುಬ್ಬಳ್ಳಿ/ಧಾರವಾಡ |
| 74. | ಶ್ರೀ ಪ್ರಕಾಶ್ ಪಿ. ಆರ್ | ಚಿಕ್ಕಬಳ್ಳಾಪುರ |
| 75. | ಶ್ರೀ ಬಾಲಸುಬ್ರಮಣ್ಯ ಎಸ್. | ಚಾಮರಾಜನಗರ |
| 76. | ಶ್ರೀ ನಾಗೇಶ್ ಜಿ. ಎಸ್ | ಬೆಂಗಳೂರು ಉತ್ತರ |
| 77. | ಶ್ರೀ ಪ್ರಸಾದ್ಎಸ್.ಎಸ್ | ಬೆಂಗಳೂರು ಕೇಂದ್ರ |
| 78. | ಶ್ರೀ ರಾಜಶೇಖರ್ಆರ್.ಜಿ | ಬೆಂಗಳೂರು ದಕ್ಷಿಣ |
| 79. | ಶ್ರೀ ದಿಲೀಪ್ಕುಮಾರ್. ಎ. | ಬೆಂಗಳೂರು ಉತ್ತರ |
| 80. | ಶ್ರೀ ಮಂಜುನಾಥ್. ಕೆ. (LNT) | ಬೆಂಗಳೂರು ಗ್ರಾಮಾಂತರ |
| 81 | ಶ್ರೀ ವಿಶ್ವನಾಥ್ | ವಿಜಯನಗರ |
| 82. | ಶ್ರೀ ಕೃಷ್ಣಾನಂದ ಭಾತ್ರ | ಕುಂದಾಪುರ, ಉಡುಪಿ ಜಿಲ್ಲೆ |
| 83. | ಶ್ರೀ ಶ್ರೀಪಾದ ನಾರಾಯಣ ರಾಯ್ಸದ್ | ಸಿರಸಿ ತಾ।।, ಉತ್ತರ ಕನ್ನಡ ಜಿಲ್ಲೆ |
| 84. | ಶ್ರೀ ಶೇಷಾದ್ರಿ ಬಿ.ವಿ. | ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ |
| 85. | ಶ್ರೀ ವೆಂಕಟೇಶ್ ಬಿ. ದೇಶಪಾಂಡೆ | ಬಾಗಲಕೋಟೆ |
| 86. | ಶ್ರೀ ಪ್ರಕಾಶ್ ಡಿ.ಟಿ. | ಮೈಸೂರು |
| 87. | ಶ್ರೀ ಪ್ರಕಾಶ್ ಭಟ್ ಎನ್. | ಬೆಂಗಳೂರು |
| 88. | ಡಾ।। ಪ್ರಸನ್ನಾಚಾರ್ ಎಸ್. ಕಟ್ಟಿ | ಬೆಂಗಳೂರು |
| 89. | ಶ್ರೀ ವಿಶ್ವನಾಥ್ | ವಿಜಯನಗರ ಜಿಲ್ಲೆ |
| 90. | ಶ್ರೀ ಮಹೇಶ್ ಕ.ಜೆ. | ಪುತ್ತೂರು, ದ.ಕ. ಜಿಲ್ಲೆ |
| 91. | ಶ್ರೀ ಪ್ರಸಾದ್ ಬಿ.ಎನ್. (ಐಯಂಗಾರ್) | ಬೆಂಗಳೂರು ದಕ್ಷಿಣ |

## ರಾಜ್ಯ ಸಂಘಟನಾ ಕಾರ್ಯದರ್ಶಿಗಳು :

| ಕ್ರಮ ಸಂಖ್ಯೆ | ಹೆಸರು | ಜಿಲ್ಲೆ |
|---|---|---|
| 1. | ಶ್ರೀ ಗುರುರಾಜ್ ಗೊಂಬಿ | ಬಾಗಲಕೋಟೆ |
| 2. | ಶ್ರೀ ಆನಂದ ಮೂರ್ತಿ | ಕೋಲಾರ |
| 3. | ಶ್ರೀ ರಾಘವೇಂದ್ರ ಮಯ್ಯ. ವಿ | ರಾಮನಗರ |
| 4. | ಡಾ।। ಹರೀಶ್. ಹೆಚ್ | ತುಮಕೂರು |
| 5. | ಶ್ರೀ ಸತೀಶ್ ಉರಾಳ್ | ಬೆಂಗಳೂರು ದಕ್ಷಿಣ |
| 6. | ಶ್ರೀ ರವಿಕುಮಾರ್. ಕೆ.ಎನ್ | ಬೆಂಗಳೂರು ದಕ್ಷಿಣ |
| 7. | ಡಾ।। ಲಕ್ಷ್ಮೀದೇವಿ | ಮೈಸೂರು |
| 8. | ಶ್ರೀ ಶ್ರೀನಿವಾಸ್. ಪಿ.ಆರ್ | ಬೆಂಗಳೂರು ಕೇಂದ್ರ |
